35

ಶರಾಬಿನ ಪೀಪಾಯಿಗಳು

ಅನುವಾದಕರು:

ಬಳ್ಕೂರು ಸುಬ್ರಾಯ ಅಡಿಗ

ಗಂಗೊಳ್ಳಿ.

1955.

ಒಂದಾಣೆ ಮಾಲೆ

ಒಂದಾಣೆ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗಳು

೧. *ಕೆಪ್ಪಟರಾಯ (ವಿನೋದ ಕಥೆ) ಲೇ: ದಿ| ಎಮ್. ಎನ್. ಕಾಮತ್.
೨. ನಾರೀಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ ಮತ್ತು ಇತರ ಕಥೆಗಳು.
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ) ಲೇ: ದಿ| ಎಮ್. ಎನ್. ಕಾಮತ್.
೫. *ಅದ್ಭುತ ತ್ಯಾಗ ಮತ್ತು ಇತರ ಕಥೆಗಳು (ವೈದ್ಯಗುರು ಎಮ್. ಆರ್. ಭಟ್.)
೬. ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ)
೭. 'ಬೀಡಿ ಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು)
೮. ಇಂಗ್ಲಿಷ್-ಕನ್ನಡ ಅರ್ಥಕೋಶ (ಭಾರತ ಸಂವಿಧಾನದಿಂದ)
೯. *ಲಂಚಕ್ಕೆ ಸಂಚಕಾರ (ಡಾ| ಎಸ್. ಪಿ. ಭಟ್.)
೧೦. ಟಿಶ್ಯೂ ಔಷಧಿಗಳ ಕೈಪಿಡಿ. (ಶ್ರೀ| ಪಿ. ಎಸ್. ವೆಂಕಟಕೃಷ್ಣರಾವ್.)
೧೧. ಶ್ರೀಕ್ಷೇತ್ರ ಧರ್ಮಸ್ಥಳ (ದ್ವಿತೀಯ ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು. (ಎಲ್. ಎಸ್. ನಾಯಕ.)
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು. (ಡಾ| ವಿ. ಆರ್. ಭಟ್.)
೧೪. "ವೆಂಕಟನ ಸಂಕಟ" (ಏಕಾಂಕ ಪ್ರಹಸನ) ಮತ್ತು ಎರಡು ಕಥೆಗಳು.
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ).
೧೬. ವೇಣೂರಿನ ಗತವೈಭವ. (ಲೇ: ಪಿ| ಪಂಡಿತ ಲೋಕನಾಥ ಶಾಸ್ತ್ರಿಗಳು.)
೧೭. ಒಗಟುಗಳು. [ಲೇ: ಶ್ರೀ ಟಿ. ಚಂದ್ರರಾಜ ಸೆಟ್ಟಿ.]
೧೮. ಜಗಳಗಂಟಿ ಮತ್ತು ಇತರ ಕಥೆಗಳು. [ಲೇ: ವೈದ್ಯಗುರು ಎಮ್. ಆರ್. ಭಟ್.]
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು (ಲೇ: ದಿ| ಎಮ್. ಎನ್. ಕಾಮತ್)
೨೧. ಭಾರತದ ಮಹಾನಗರಗಳು (ಪ್ರಥಮ ಭಾಗ)
೨೨. ತಿರುಕ್ಕುರಲ್ (ಶ್ರೀ| ಡಿ. ಪುಟ್ಟಸ್ವಾಮಿ.)
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು. (ಲೇ: ಶ್ರೀ| ಬಿ. ಶಂಕರ ಭಟ್.)
೨೪. ಭಾರತದ ಮಹಾನಗರಗಳು (ದ್ವಿತೀಯ ಭಾಗ)
೨೫. ಧೈರ್ಯ ಮತ್ತು ಇತರ ಸತ್ಯಕಥಾನಕಗಳು. (ಶ್ರೀ ಎಲ್. ಎಸ್. ನಾಯಕ.)
೨೬. ಮಾರಾವತಾರ (ಏಕಪಾತ್ರ ಯಕ್ಷಗಾನ ಪ್ರಬಂಧ) (ಲೇ: ಶ್ರೀ| ಜಿ. ಆರ್. ಪಾಂಡೇಶ್ವರ)
೨೭. ಹಾಸವಿಲಾಸ (ಆರಿಸಿ ತೆಗೆದ ನಗೆಹನಿಗಳು)
೨೮. ಸತ್ಯವಂತ ಬಾಬಿ (ಏಕಾಂಕ ಪ್ರಹಸನ)
೨೯. ಜಾಣ್ಮೆಯ ಒಗಟುಗಳು (ಸಂಗ್ರಾಹಕರು: ಡಾ| ಎಸ್. ಪಿ. ಭಟ್, ಮಂಗಳೂರು)
೩೦. ಜಾತಕ ಕಥೆಗಳು (ಸಂಗ್ರಾಹಕರು: ಎಮ್. ಸುಬ್ರಾಯನ್, ವಿದ್ವಾನ್.)
೩೧ ಕಾರ್ಕಳದ ಚರಿತ್ರೆ (ಲೇ: ಶ್ರೀ| ಡಿ. ಪುಟ್ಟಸ್ವಾಮಿ, ಬಿ. ಎ, ಬಿ. ಎಲ್., ಎಡ್ವೊಕೇಟ್)
೩೨. ಮರ್ಜಿ (ಏಕಾಂಕ ಪ್ರಹಸನ) ರಚಯಿತರು: ದಿ| ಎಮ್. ಎನ್. ಕಾಮತ್.
೩೩. ದರ್ಶನದ ಕಥೆಗಳು (ಲೇ: ಬಿ. ಶಂಕರ ಭಟ್ಟ ಮತ್ತು ಬಿ. ಎಮ್. ಶರ್ಮಾ)
೩೪. ಅಳುವಿನ ಹೊಳೆ ಮತ್ತು ಕೇಶವಭೂಪ (ಮಕ್ಕಳ ಕಥೆಗಳು) ಲೇ: "ನವಗಿರಿನಂದ"
೩೫. ಶರಾಬಿನ ಪೀಪಾಯಿಗಳು [ಲೇ: ಬಳ್ಕೂರು ಸುಬ್ರಾಯ ಅಡಿಗ].

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಈ ವರೆಗೆ ಮೂವತ್ತೈದು ಪುಸ್ತಕಗಳಲ್ಲಿ, ಮೂವತ್ತನಾಲ್ಕು ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ 788 ಪುಟಗಳನ್ನು ಕೊಟ್ಟಿರುತ್ತದೆ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು-1.

ಶರಾಬಿನ ಷೀಪಾಯಿಗಳು

ಟರ್ಕೀ ಇತಿಹಾಸ ಪುಸ್ತಕದಿಂದ ಆರಿಸಿದ ೫೦೦ ವರ್ಷಗಳ ಹಿಂದಿನ ರೋಮಾಂಚಕಾರೀ ಸತ್ಯಕಥೆಯೊಂದು!

....

"ನಾನು ಗ್ರೀಕನು. ನನ್ನ ತಂದೆ ತಾಯಂದಿರು ಸ್ಮರ್ನಾ ದೇಶದ ವಾಸಿಕರು. ಅವರು ಬಹಳ ಬಡವರು. ನಾನು ಅವರ ಒಬ್ಬನೇ ಮಗ. ತಂದೆ ನನಗೆ ತಮ್ಮ ಉದ್ಯೋಗವನ್ನೇ ಕಲಿಸಿದರು. ಶರಾಬು ತಯಾರಿಸುವುದು ನಮ್ಮ ಕೆಲಸ. ನಾನು ೨೦ನೇ ವರ್ಷದಲ್ಲಿ ಕಾಲಿಡುತ್ತಲೇ ತಂದೆ ತಾಯಿಗಳಿಬ್ಬರೂ ಸತ್ತುಹೋದರು. ಈಗ ಉದರ ಪೋಷಣೆಯ ಭಾರ ನನ್ನ ಮೇಲೆಯೇ ಬಿತ್ತು. ನಾನು ಒಬ್ಬ ಮುದಿ ಯಹೂದಿ ಶರಾಬು ವ್ಯಾಪಾರಿಯ ಬಳಿ ಕೆಲಸಕ್ಕೆ ಸೇರಿದೆ. ತಂದೆ ಸತ್ತು ಮೂರು ವರ್ಷಗಳಾಗುವ ವರೆಗೆ ನಾನು ಇದೇ ಕೆಲಸ ಮಾಡುತ್ತಿದ್ದೆ. ಆಗಲೇ ನಡೆದ ಒಂದು ಘಟನೆಯಿಂದ ನನ್ನ ಜೀವನಕ್ರಮವೇ ಬದಲಾಗಿ ನಾನೀಸ್ಥಿತಿಗೆ ತಲುಪಿದ್ದೇನೆ.

ಆ ಸಮಯ ನಾನು ತುಂಬಾ ಗಂಭೀರನೂ ಪರಿಶ್ರಮಿಯೂ ಆಗಿದ್ದೆ. ನನ್ನ ಗುಣಗಳ ಮೇಲೆ ಮುಗ್ಧನಾದ ವ್ಯಾಪಾರಿಯು ನನ್ನನ್ನು ಎಲ್ಲ ಕೆಲಸಗಾರರ ಮುಖಂಡನನ್ನಾಗಿ ಮಾಡಿದ. ನಾನು ಎಲ್ಲರ ಮೇಲ್ವಿಚಾರಣೆ ಮಾಡುತ್ತಿದ್ದೆ. ಅಲ್ಲದೆ ನಡುನಡುವೆ ಉತ್ತಮ ಶರಾಬನ್ನೂ ತಯಾರಿಸುತ್ತಿದ್ದೆ. ನನ್ನ ಯಜಮಾನನಲ್ಲಿ ಒಬ್ಬ ನೀಗ್ರೋ ಗುಲಾಮನಿದ್ದ. ಅವನು ದಷ್ಟಪುಷ್ಟ ತರುಣನೂ ಬಹು ದುಷ್ಟನೂ ಆಗಿದ್ದ. ಅವನಿಂದ ಕೆಲಸಮಾಡಿಸಲು ಯಜಮಾನನಿಗೆ ತುಂಬಾ ಕಷ್ಟವೆನಿಸುತ್ತಿತ್ತು. ಅವನು ಯಜಮಾನನು ವಿಧಿಸಿದ ಶಿಕ್ಷೆಯನ್ನು ನಗುನಗುತ್ತ ಸಹಿಸುತ್ತಿದ್ದ; ಮತ್ತು ಶಿಕ್ಷೆ ಪಡೆದ ಮೇಲೆ ಮೊದಲಿಗಿಂತ ಹೆಚ್ಚು ಉದಾಸೀನನೂ ಕ್ರೂರಿಯೂ ಆಗುತ್ತಿದ್ದ. ಅವನ ತಪ್ಪು ತೋರಿಸಿಕೊಟ್ಟಾಗ ಅವನು ಕಂಗಳಿಂದ ಕಿಡಿಕಾರುತ್ತಿದ್ದ. ಎಂದಾದರೊಂದು ದಿನ ಇವನು ನನ್ನನ್ನು ಕೊಂದೇ ಹಾಕುವನೆಂಬಷ್ಟರ ಮಟ್ಟಿಗೆ ನಾನು ಅವನ ಸಿಟ್ಟಿಗೆ ಹೆದರುತ್ತಿದ್ದೆ. ಆ ನೀಗ್ರೋವನ್ನು ಕೆಲಸ

ದಿಂದ ತೆಗೆದುಹಾಕೆಂದು ನಾನು ಅನೇಕ ಸಲ ಯಜಮಾನನೊಡನೆ ಹೇಳಿದೆ. ಆದರೆ ಇಷ್ಟು ಪರಿಶ್ರಮಿ ತರುಣನು ಬೇರೆಲ್ಲಿ ದೊರೆತಾನು? ಹೀಗಾಗಿ ಮಾಲಿಕನು ನನ್ನ ಮಾತನ್ನು ನಗೆಯಲ್ಲೇ ತೇಲಿಸುತ್ತಿದ್ದ.

ಒಂದು ದಿನ ಬೆಳಗ್ಗೆ ನಾನು ಶರಾಬು ತಯಾರಿಸುವ ಕೋಣೆಗೆ ಹೋದಾಗ ಗುಲಾಮ ಮಲಗಿಕೊಂಡಿದ್ದ. ನನಗೆ ಶರಾಬಿನ ದೊಡ್ಡದೊಂದು ಪೀಪಾಯಿ ಬೇಕಾಗಿತ್ತು. ಅವನು ಅದನ್ನು ನನಗಾಗಿ ತಯಾರಿಸುತ್ತಿರಬಹುದೆಂದು ನನ್ನ ಎಣಿಕೆಯಿತ್ತು. ನಾನು ಅವನಿಗೆ ಸ್ವತಃ ಶಿಕ್ಷೆ ಕೊಡಲು ಹೆದರುತ್ತಿದ್ದುದರಿಂದ ಮಾತಾಡದೆ ಅವನ ಕೃತ್ಯವನ್ನು ತೋರಿಸಲು ಮಾಲಿಕನನ್ನು ಕರತಂದೆ. ಯಹೂದೀ ಮಾಲಿಕನು ಅವನ ಆಲಸ್ಯವನ್ನು ಕಂಡು ಕಿಡಿಕಿಡಿಯಾದ. ಅವನಿಗೊಂದು ಬಲವಾದ ಏಟು ಬಾರಿಸಿದ. ನೀಗ್ರೋ ಗರ್ಜಿಸುತ್ತ ಎದ್ದು ಕುಳಿತ. ಆದರೆ ಯಜಮಾನನ ಕೈಯಲ್ಲಿ ಬೆತ್ತವನ್ನು ಕಂಡಾಗ ಅವನು ತಣ್ಣಗಾದ. 'ನಾನೂ ನೋಡಿಕೊಳ್ಳುವೆ!' ಎಂದು ಮೆಲ್ಲನೆ ಗೊಣಗುತ್ತ ಅವನು ಕೆಲಸಕ್ಕಾರಂಭಿಸಿದ. ಆದರೆ ಮಾಲಿಕನು ಅಲ್ಲಿಂದ ಹೊರಟು ಹೋಗುತ್ತಲೇ ಆ ನೀಗ್ರೋ ಒಂದು ಬಡಿಗೆಯನ್ನೆತ್ತಿ ನನ್ನತ್ತ ಓಡಿ ಬಂದ. ನಾನೇ ಇದಕ್ಕೆ ಮೂಲಕಾರಣನೆಂದು ಅವನರಿತಿದ್ದ. ಅವನ ಹೊಡೆತವನ್ನು ತಪ್ಪಿಸಿಕೊಳ್ಳದೆ ಉಪಾಯವಿದ್ದಿಲ್ಲ. ನಾನು ಒಂದು ಪೀಪಾಯಿಯ ಹಿಂದೆ ಅಡಗಿಕೊಂಡೆ. ಅವನು ನನ್ನನ್ನು ಹಿಂಬಾಲಿಸಿದ. ಆತ್ಮರಕ್ಷಣೆಗಾಗಿ ಒಂದು ಸುತ್ತಿಗೆಯನ್ನು ಎತ್ತಿ ಹಿಡಿದೆ. ಅವನು ದಾರಿಯಲ್ಲೇ ಒಂದು ಸ್ಟೂಲಿಗೆ ಢಿಕ್ಕಿಹೊಡೆದು ಬಿದ್ದುಬಿಟ್ಟ. ನಾನು ಜೋರಾಗಿ ಆ ಸುತ್ತಿಗೆಯಿಂದ ಅವನ ತಲೆಗೆ ಹೊಡೆದುಬಿಟ್ಟೆ. ಆ ಪೆಟ್ಟು ಮರ್ಮಸ್ಥಾನಕ್ಕೆ ಬಿದ್ದು ಅವನು ಅಲ್ಲೇ ಸತ್ತುಹೋದ.

ಈ ಭಯಂಕರ ಘಟನೆಯಿಂದ ನಾನು ತುಂಬಾ ಹೆದರಿದೆ. ಆತ್ಮರಕ್ಷಣೆಗಾಗಿಯೇ ಅವನ ಕೊಲೆ ಗೈದಿದ್ದೆನಾದರೂ ನನ್ನ ಮಾಲಿಕನು ಗುಲಾಮನ ಮರಣದಿಂದ ವಿಪರೀತ ಸಿಟ್ಟಾಗುವನೆಂದು ನನಗೆ ತಿಳಿದಿತ್ತು. ಬಳಿಕ ನಾನು ನ್ಯಾಯಾಧೀಶರೆದುರಿಗೆ ಒಯ್ಯಲ್ಪಟ್ಟಾಗ ಆತ್ಮರಕ್ಷಣೆಗಾಗಿ ನೀಗ್ರೋವನ್ನು ಕೊಂದನೆಂದು ನನ್ನ ಪರವಾಗಿ ಯಾರು ಸಾಕ್ಷ್ಯ ಹೇಳುವವರಿದ್ದಾರೆ? ನನ್ನ ನಿರಪರಾಧಿತನವನ್ನು ರುಜುವಾತುಪಡಿಸಲಾಗದೆ ನಾನು ಶಿಕ್ಷೆಹೊಂದಬೇಕಾಗುವುದು. ತುಸು ಹೊತ್ತು ಆಲೋಚಿಸಿದ ಬಳಿಕ ಮೃತಶರೀರವನ್ನು

ಎಲ್ಲಾದರೂ ಅಡಗಿಸಿಟ್ಟು, ನೀಗ್ರೋ ಓಡಿಹೋದನೆಂದು ಮಾಲಿಕನೊಡನೆ ಸುಳ್ಳುಹೇಳಬೇಕೆಂದು ನಿರ್ಧರಿಸಿದೆ. ಆದರೆ ಈ ಕೆಲಸ ತುಸು ಕಷ್ಟವಾದುದು; ಶರಾಬಿನಂಗಡಿಯಿಂದ ಆ ಹೆಣವನ್ನು ಗುಟ್ಟಾಗಿ ಹೇಗೆ ತರಬಲ್ಲೆ? ಏನೇ ಇರಲಿ; ಪ್ರಕೃತದ ಗಂಡಾಂತರದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಶರಾಬಿನ ದೊಡ್ಡದೊಂದು ಪೀಪಾಯಿಯಲ್ಲಿ ಆ ಹೆಣವನ್ನು ಹಾಕುವುದೆಂದು ನಿಶ್ಚಯಿಸಿದೆ. ಆ ದೊಡ್ಡ ದೇಹವನ್ನು ಪೀಪಾಯಿಯಲ್ಲಿ ಹಾಕಲು ತುಸು ಕಷ್ಟವಾದರೂ ಕೊನೆಗೆ ಯಶಸ್ವಿಯಾದೆ. ಆ ಹೆಣವನ್ನು ಒಂದು ದೊಡ್ಡ ಪೀಪಾಯಿಯಲ್ಲಿ ಹಾಕಿ, ಮುಚ್ಚಿ, ಗೋದಾಮಿನಲ್ಲೊಂದೆಡೆ ಉರುಳಿಸಿಬಿಟ್ಟೆ. ಆ ಕೋಣೆಯಲ್ಲಿ ಮುಂದಿನ ವರ್ಷಕ್ಕಾಗಿ ಶರಾಬನ್ನು ಸಂಗ್ರಹಿಸಿಡಲಾಗುತ್ತಿತ್ತು. ಆ ಪೀಪಾಯಿಯನ್ನು ಒಂದೆಡೆ ನಿಲ್ಲಿಸಿ ಅದರ ಬಾಯಿಯ ವರೆಗೆ ಶರಾಬನ್ನು ತುಂಬಿಸಿಬಿಟ್ಟೆ. ಈಗ ನಾನು ನಿಶ್ಚಿಂತನಾದೆ. ಒಂದು ಭಾರ ತಲೆಯಿಂದ ತಪ್ಪಿದಂತಾಯಿತು. ಇನ್ನು ಬೇಗನೆ ಈ ವಿಚಾರ ಯಾರಿಗೂ ತಿಳಿಯುವಂತಿಲ್ಲವಷ್ಟೆ!

ಈ ಭಯಂಕರ ಕೃತ್ಯವನ್ನು ಮುಗಿಸಿ ನಾನು ಏಳುತ್ತಿದ್ದಾಗಲೇ ಮಾಲಿಕ ಬಂದುಬಿಟ್ಟ. ಅವನು ಗುಲಾಮನ ವಿಚಾರವಾಗಿ ಪ್ರಶ್ನಿಸಿದ. ಅವನು ಕೆಲಸ ಬಿಟ್ಟು ಓಡಿಹೋದನೆಂದು ನಾನು ಆಣೆಯಿಟ್ಟು ಹೇಳಿದೆ. ಮಾಲಿಕನು ಅವನ ಪತ್ತೆ ಹಚ್ಚಲು ಪೋಲಿಸರಿಗೆ ದೂರು ಕೊಟ್ಟ. ಬಹಳ ಹುಡುಕಾಡಿದರೂ ಅವನ ಪತ್ತೆಯಾಗದಿರಲು ಜೀವನಕ್ಕೆ ಬೇಸತ್ತು ಅವನು ಸಮುದ್ರದಲ್ಲಿ ಮುಳುಗಿ ಸತ್ತಿರಬೇಕೆಂದು ಊರವರೆಲ್ಲ ಊಹಿಸಿದರು. ನಾನು ಮೊದಲಿನಂತೆಯೇ ಕೆಲಸಮಾಡುತ್ತಿದ್ದೆ. ಎಲ್ಲ ವಸ್ತುಗಳೂ ನನ್ನ ವಶವೇ ಇರುತ್ತಿದ್ದವು. ಹೀಗಾಗಿ ಸಂದರ್ಭ ಸಿಕ್ಕಾಗ ಆ ಹೆಣಕ್ಕೆ ಯೋಗ್ಯ ವ್ಯವಸ್ಥೆ ಮಾಡಬಹುದೆಂದು ನಾನು ಲೆಕ್ಕಹಾಕಿದೆ.

ಮುಂದಿನ ವರ್ಷ ವಸಂತ ಮಾಸದಲ್ಲಿ, ನಾನು ಒಂದು ಪೀಪಾಯಿಯ ಶರಾಬನ್ನು ಮತ್ತೊಂದಕ್ಕೆ ಹೊಯ್ಯುವುದರಲ್ಲೇ ಮಗ್ನನಾಗಿದ್ದಾಗ 'ಆಗಾ ಸಾಹೇಬರು ಅಲ್ಲಿಗೆ ದಯಮಾಡಿಸಿದರು. ಆಗಾ ಸಾಹೇಬರು ಪ್ರಸಿದ್ಧ ಕುಡುಕರೂ ನಮ್ಮ ಹಳೇ ಗಿರಾಕಿಗಳೂ ಆಗಿದ್ದರು. ಅವರ ಸೇವಕರ ಗುರುತು ನಮಗಿರಲಿಲ್ಲ. ಆದ್ದರಿಂದ ಅವರೇ ಸ್ವತಃ ಶರಾಬುಕೊಳ್ಳಲು ಬರುತ್ತಿದ್ದರು. ಅವರು ಯಾವಾಗಲೂ ಶರಾಬಿನ ಪೀಪಾಯಿಯನ್ನೇ

ಕೊಂಡುಕೊಳ್ಳುತ್ತಿದ್ದರು. ಏಳೆಂಟು ಜನ ಸೇವಕರು ಅದನ್ನು ಹೊತ್ತು ಅವರ ಮನೆಗೆ ಮುಟ್ಟಿಸುತ್ತಿದ್ದರು. ನನ್ನ ಮಾಲಿಕನು ಇಕ್ಕಡೆಗಳಲ್ಲಿ ಸಾಲಾಗಿರುವ ಪೀಪಾಯಿಗಳನ್ನು ತೋರಿಸಿದ. ನೀಗ್ರೋವಿನ ಹೆಣ ಮುಂದಿನ ಸಾಲಿನಲ್ಲಿಲ್ಲವೆಂದು ನನಗೆ ತಿಳಿದಿತ್ತು. ಆಗಾ ಸಾಹೇಬರು ಮುಂದಿನ ಸಾಲಿನ ೨-೩ ಪೀಪಾಯಿಗಳ ಶರಾಬನ್ನು ಪರೀಕ್ಷಿಸಿ.....'ಗೆಳೆಯ, ನೀನು ಮೊದಲು ಹಾಳು ಶರಾಬನ್ನೇ ತೋರಿಸುತ್ತೀ. ಇಂದು ನಾನು ಹಿಂದಿನ ಸಾಲಿನಿಂದ ಒಂದು ಪೀಪಾಯಿಯನ್ನು ಆರಿಸುವೆ. ಆ ಸಾಲಿನ ಮೂರನೇ ಪೀಪಾಯಿಯ ಬಾಯಿ ತೆರೆಯುವಂತೆ ನಿನ್ನ ಸೇವಕನಿಗೆ ಹೇಳು' ಎಂದರು. ನೀಗ್ರೋವಿನ ಹೆಣ ಆ ಪೀಪಾಯಿಯಲ್ಲೇ ಇತ್ತು. ಆ ಶರಾಬನ್ನು ಬಾಯಿಗೆ ಹಾಕುತ್ತಲೇ ಅವರು ಉಗುಳಿ ಬಿಡುವರೆಂದು ನನ್ನ ನಂಬಿಕೆ. ಆದ್ದರಿಂದ ನಾನು ಅದರ ಬಾಯಿ ತೆರೆದು ಆಗಾ ಸಾಹೇಬರ ಎದುರಿಗಿಟ್ಟೆ. ಅವರು ಮೊದಲು ಮೂಸಿ ಬಾಯಿಗಿಟ್ಟರು. ಪುನಃ ಬೆಳಕಿನಲ್ಲಿ ಪರೀಕ್ಷಿಸಿ ರುಚಿ ನೋಡಿದರು; ಮತ್ತು ತುಟಿ ಚಪ್ಪರಿಸುತ್ತ ಉಚ್ಚಸ್ವರದಿಂದ ಮಾಲಿಕನೊಡನೆ........'ನೀಚ ಯಹೂದೀ ಗೂಬೆಯೇ! ನಾನಾರೆಂದು ತಿಳಿದಿದ್ದಿ? ಯಾವಾಗಲೂ ಹಾಳು ಶರಾಬನ್ನೇ ಕೊಡುತ್ತಿರುವೆಯಲ್ಲಾ! ಇಷ್ಟು ಉತ್ತಮ ಶರಾಬನ್ನು ನಾನಿದುವರೆವಿಗೂ ಸವಿಯಲಿಲ್ಲ' ಎಂದರು.

'ಎಲ್ಲಾ ಪೀಪಾಯಿಗಳ ಶರಾಬೂ ಒಂದೇ ರೀತಿಯದಲ್ಲವೆ?' ಎಂದು ಮಾಲಿಕನು ನನ್ನನ್ನು ಕೇಳಿದ. ನಾನು ಅವನ ಮಾತನ್ನೇ ಸಮರ್ಥಿಸುತ್ತ 'ಎಲ್ಲಾ ಶರಾಬೂ ಒಂದೇ'........ಎಂದು ಹೇಳಿದೆ.

ನಾನು ಒಪ್ಪದೇ ಇದ್ದುದನ್ನು ಕಂಡು ಆಗಾ ಸಾಹೇಬರು.....'ನಿಮಗೆ ನಂಬಿಕೆಯಾಗದಿದ್ದರೆ ನೀವೇ ಸ್ವತಃ ಇವೆರಡೂ ಪೀಪಾಯಿಗಳನ್ನೂ ಪರೀಕ್ಷಿಸಿ ನೋಡಿರಿ' ಎಂದರು.

ನನ್ನ ಮಾಲಿಕನು ಎರಡೂ ಪೀಪಾಯಿಗಳ ಶರಾಬನ್ನೂ ಸವಿದು ಆಗಾ ಸಾಹೇಬರ ಮಾತು ಸರಿಯಾದುದೆಂದು ಒಪ್ಪಿಕೊಂಡ. ಅವನು ಆಶ್ಚರ್ಯದಿಂದ....'ನಿಜಕ್ಕೂ ಈ ಶರಾಬಿನ ರುಚಿ ಉತ್ಕೃಷ್ಟವಾಗಿದೆ! ಆದರೆ ಹೀಗೇಕಾಯಿತೆಂದು ನನಗೆ ತಿಳಿದಿಲ್ಲ. ಜೇರಿಸ್! ನೀನೂ ಇದನ್ನು ಸವಿದು ನೋಡು' ಎಂದು ನನ್ನೊಡನೆ ಹೇಳಿದ. ನಾನು ಗ್ಲಾಸಿನಲ್ಲಿ ಶರಾಬು ತುಂಬಿಸಿ ತುಟಿಗಳ ವರೆಗೊಯ್ದೆ. ಆದರೆ ಕುಡಿಯಲಾಗಲಿಲ್ಲ. ನಾನು

ಕುಡಿದವನಂತೆ ನಟಿಸಿ......'ಹೌದು, ಹೌದು. ಇದರ ಸವಿ ಇತರ ಶರಾಬಿನ ಸವಿಗಿಂತ ಎಷ್ಟೋ ಮೇಲು' ಎಂದು ಹೇಳಿದೆ.

ಆಗಾ ಸಾಹೇಬರಿಗೆ ಈ ಶರಾಬು ತುಂಬಾ ಮೆಚ್ಚಿಗೆಯಾಯಿತು. ಹಿಂದಿನ ಸಾಲಿನ ಇತರ ಪೀಪಾಯಿಗಳಲ್ಲಿ ಇದಕ್ಕಿಂತಲೂ ಉತ್ತಮ ಶರಾಬು ಸಿಗಬಹುದೆಂಬ ಆಸೆಯಿಂದ ಅವರು ಮತ್ತೂ ನಾಲ್ಕಾರು ಪೀಪಾಯಿಗಳ ಬಾಯಿ ತೆರೆಯಿಸಿದರು. ಆದರೆ ಯಾವುದೂ ಅಷ್ಟು ರುಚಿಸಲಿಲ್ಲ. ಕೊನೆಗೆ ಅವರು ಹೆಣವಿರುವ ಪೀಪಾಯಿಯನ್ನೇ ಒಯ್ಯುವಂತೆ ಸೇವಕರಿಗೆ ಅಪ್ಪಣೆ ಯಿತ್ತರು.

ಇಷ್ಟರವರೆಗೆ ಕತೆ ಕೇಳುತ್ತಿದ್ದ ಪಾಶಾ ಸಾಹೇಬರು ಜೇರಿಸನನ್ನು ತಡೆದು—'ಸುಳ್ಳು ಹೇಳಬೇಡ, ಕಾಫಿರ್! ಆ ಶರಾಬು ನಿಜಕ್ಕೂ ಬೇರೆ ಶರಾಬಿಗಿಂತ ಶ್ರೇಷ್ಠವಾಗಿತ್ತೆಂದು ನಿನ್ನ ಹೇಳಿಕೆಯೇ!' ಎಂದರು.

"ಹುಜೂರ್; ನಿಮ್ಮೆದುರಿಗೆ ಸುಳ್ಳು ಹೇಳುವ ದುಃಸಾಹಸ ಮಾಡ ಲಾರೆ. ಆ ಶರಾಬನ್ನು ನಾನು ಕುಡಿದಿರಲಿಲ್ಲವೆಂದು ಮೊದಲೇ ನಿವೇದಿಸಿ ಕೊಂಡಿದ್ದೇನೆ. ಆದರೆ ಆಗಾ ಸಾಹೇಬರು ಹೋದ ಮೇಲೆ ನನ್ನ ಮಾಲಿ ಕನು ಆ ಶರಾಬಿನ ರುಚಿಯ ವಿಚಾರವಾಗಿ ತುಂಬಾ ಆಶ್ಚರ್ಯ ಪ್ರಕಟಿಸಿದ. ಇದುವರೆಗೆ ತಾನು ಕುಡಿದ ಶರಾಬಿನಲ್ಲಿ ಅದು ಅತ್ಯಂತ ಹೆಚ್ಚು ರುಚಿಯದಾಗಿ ತ್ತೆಂದು ಅವನು ಹೇಳಿದ. ಆಗಾಸಾಹೇಬರು ಆ ಪೀಪಾಯಿಯನ್ನೇ ಒಯ್ದುದ ರಿಂದ ಅವನಿಗೆ ತುಂಬಾ ಬೇಸರವಾಗಿತ್ತು. ಅಲ್ಲದೆ ಅದರ ರಹಸ್ಯವನ್ನರಿ ಯುವ ಸಂದರ್ಭ ಅವನಿಗೆ ಸಿಕ್ಕಿರಲಿಲ್ಲ. ಆದರೆ ಒಂದು ದಿನ ನಾನು ಒಬ್ಬ ಫ್ರೆಂಚ್ ವ್ಯಾಪಾರಿಯೊಡನೆ ಈ ವಿಷಯ ಪ್ರಸ್ತಾಪಿಸಿದಾಗ ಅವನು ಸ್ವಲ್ಪವೂ ಆಶ್ಚರ್ಯಪಡಲಿಲ್ಲ ಅವನು ಇಂಗ್ಲೆಂಡಿನಲ್ಲಿ ಶರಾಬಿನ ವ್ಯಾಪಾರ ಮಾಡು ತ್ತಿದ್ದ. ಶರಾಬನ್ನು ಉತ್ಕೃಷ್ಟಗೊಳಿಸಲೆಂದು ತಾವು ಹೆಚ್ಚಾಗಿ ಅದಕ್ಕೆ ದನ, ಕುದುರೆ ಮೊದಲಾದ ಪ್ರಾಣಿಗಳ ಮಾಂಸವನ್ನು ಕತ್ತರಿಸಿ ಹಾಕುತ್ತೇ ವೆಂದೂ ಮಾಂಸದಿಂದ ಶರಾಬು ತುಂಬ ಸ್ವಾದಿಷ್ಟವಾಗುವುದೆಂದು ಅವನು ತಿಳಿಸಿದ."

'ಅರೆ ಅಲ್ಲಾ!'—ಎಂದು ಉದ್ಗರಿಸಿ ಪಾಶಾ ಎಂದರು–'ಇರಬಹುದು, ಇರಬಹುದು. ಇಂಗ್ಲೀಷರಿಗೆ ಮಾಂಸವೆಂದರೆ ಪ್ರಾಣವೆಂದು ಕೇಳಿದ್ದೇನೆ. ಆಗಲಿ; ನಿನ್ನ ಕತೆಯನ್ನು ಮುಂದುವರಿಸು.'

ಚೇರಿಸ್ ಪುನಃ ತನ್ನ ಕತೆಯನ್ನು ಹೇಳತೊಡಗಿದ:—

"ಆಗಾಖಾನರ ಸೇವಕರು ಆ ಪೀಪಾಯಿಯನ್ನೊಯ್ದಾಗ ನನಗೆಷ್ಟು ಭಯವಾಗಿರಬಹುದೆಂಬುದು ನಿಮ್ಮ ಕಲ್ಪನೆಗೂ ನಿಲುಕದ ವಿಚಾರ. ನನ್ನ ಪ್ರಾಣವೀಗ ಸಂಕಟಕ್ಕೆ ತುತ್ತಾಗಿದೆಯೆಂದೂ ಆದಷ್ಟು ಬೇಗ ಸ್ಮರ್ನಾ ಬಿಟ್ಟು ಓಡಿಹೋಗಬೇಕೆಂದೂ ಭಾವಿಸಿದೆ. ಅವರಿಗೆ ಆ ಪೀಪಾಯಿಯನ್ನು ಮುಗಿಸಲು ಎಷ್ಟು ದಿನ ಹಿಡಿದೀತೆಂದು ಲೆಕ್ಕ ಹಾಕಿ ನಾನು ಓಡುವ ವ್ಯವಸ್ಥೆ ಮಾಡಿದೆ. ನಾನು ಇನ್ನೊಂದು ಸ್ಥಳಕ್ಕೆ ವ್ಯಾಪಾರಕ್ಕಾಗಿ ಹೋಗಬಯಸುತ್ತೇನೆಂದು ಮಾಲಿಕನಿಗೆ ತಿಳಿಸಿದೆ. ನಾನಿಲ್ಲದೆ ಅವನ ಕೆಲಸ ನಡೆಯುವುದು ಕಷ್ಟವಿದ್ದುದರಿಂದ ಅವನು ಒಪ್ಪಲಿಲ್ಲ. ಆದರೆ ನನ್ನ ನಿರ್ಧಾರವೂ ಬದಲಾಗಲಿಲ್ಲ. ಮಾಲಿಕನು ತನ್ನ ವ್ಯಾಪಾರದಲ್ಲಿ ನನ್ನನ್ನು ಪಾಲುಗಾರನಾಗಿ ಮಾಡಿಕೊಳ್ಳುವ ವರೆಗೂ ಸಿದ್ಧನಾದ. ಆದರೆ ನಾನೊಪ್ಪಲಿಲ್ಲ. ಬಾಗಿಲಲ್ಲಿ ಶಬ್ದವಾದೊಡನೆಯೇ ಆಗಾಖಾನರ ಸೇವಕರು ಬಂದಿರಬೇಕೆಂದು ನಾನು ಹೆದರುತ್ತಿದ್ದೆ. ಹೊರಡುವ ಸಿದ್ಧತೆಗಳನ್ನೆಲ್ಲ ನಾನು ಪೂರೈಸಿಕೊಂಡೆ. ನಾನು ಹೊರಡುವ ಹಿಂದಿನ ದಿನದ ಸಂಜೆ ಮಾಲಿಕನು ಕೆಲವು ಕಾಗದಗಳನ್ನು ಹಿಡಿದು ನನ್ನ ಬಳಿಗೆ ಬಂದ.

'ಚೇರಿಸ್; ನಾನೇನೂ ಸುಳ್ಳು ಹೇಳುವುದಿಲ್ಲ. ವ್ಯಾಪಾರದಲ್ಲಿ ನೀನು ನನ್ನ ಪಾಲುಗಾರನೆಂಬುದಕ್ಕೆ ಈ ದಸ್ತಾವೇಜು ಸಾಕ್ಷಿಯಾಗಿದೆ. ಇದರ ಮೇರೆಗೆ ಇಂದಿನಿಂದ ನೀನು ನನ್ನ ಪಾಲುಗಾರ; ಮತ್ತು ಇಂದಿನಿಂದ ನನ್ನ ಲಾಭದ ಮೂರನೇ ಒಂದು ಪಾಲು ನಿನ್ನದಾಗುವುದು. ನೀನೇ ಸ್ವತಃ ಪರೀಕ್ಷಿಸು, ನ್ಯಾಯಾಧೀಶನ ಎದುರಿಗೇ ಇದನ್ನು ತಯಾರಿಸಲಾಗಿದೆ.'

ಮಾಲಿಕನು ದಸ್ತಾವೇಜನ್ನು ನನ್ನ ಕೈಗಿತ್ತ. ನಾನದನ್ನು ಅವನಿಗೆ ಹಿಂದಿರುಗಿಸುತ್ತಿರುವಾಗಲೇ ಬಾಗಿಲು ಬಡೆಯುವ ಸದ್ದಾಯಿತು. ನಾವಿಬ್ಬರೂ ಬೆಚ್ಚಿಬಿದ್ದೆವು. ಆಗಾಖಾನರು ನಮ್ಮನ್ನು ಹಿಡಿದು ತರಲು ಜನ ಕಳುಹಿಸಿದ್ದರು. ಯಾರು ಬಂದಿರಬಹುದೆಂದು ನಾನು ಮೊದಲೇ ಊಹಿಸಿದ್ದೆ. ಓಡಲು ಇಷ್ಟೇಕೆ ವಿಲಂಬಿಸಿದೆನೆಂದು ನನ್ನನ್ನು ನಾನೇ ನಿಂದಿಸಿಕೊಂಡೆ. ಆಗಾಖಾನರಿಗೆ ಶರಾಬು ಬಹಳ ಸವಿಯೆನಿಸಿದುದರಿಂದ ಅವರದನ್ನು ನನ್ನೆಣಿಕೆಗಿಂತಲೂ ಮೊದಲೇ ಕುಡಿದು ಮುಗಿಸಿದ್ದರು; ಅಲ್ಲದೆ ಪೀಪಾಯಿಯಲ್ಲಿ ಸುಮಾರು ಮೂರನೇ ಒಂದಂಶವನ್ನು ನೀಗ್ರೋವಿನ

ಹೆಣವೇ ಆವರಿಸಿತ್ತು. ಈಗ ನನಗೆ ಬಿಡುಗಡೆಯು ಆಸೆಯಿರಲಿಲ್ಲ. ನನ್ನ ಮಾಲಿಕನಿಗೆ ಘಟನೆಯು ಅರಿವಿಲ್ಲದುದರಿಂದ ಸಿಪಾಯಿಗಳೊಡನೆ ನಗು ನಗುತ್ತ ಸಾಗುತ್ತಿದ್ದ. ಆದರೆ ನಾನು ಮಾತ್ರ ಹೆದರಿ ಅರಿಸತ್ತಂತಾಗಿದ್ದೆ.

ನಾವು ಆಗಾಖಾನರ ದರಬಾರಿಗೆ ಒಯ್ಯಲ್ಪಟ್ಟಾಗ ಅವರು ಕೆಂಗಣ್ಣು ಗಳಿಂದ ಕಿಡಿ ಕಾರುತ್ತ ನನ್ನ ಯಜಮಾನನೊಡನೆ ಹೀಗೆಂದರು......'ನೀಚ ಯಹೂದೀ; ಇಸ್ಲಾಮಿನ ಭಕ್ತನೊಬ್ಬನೊಡನೆ ವ್ಯವಹರಿಸುತ್ತಿದ್ದಿ ಎಂದು ನಿನಗೆ ತಿಳಿದಿಲ್ಲವೆ? ನೀನು ಕೊಟ್ಟ ಪೀಪಾಯಿಯಲ್ಲಿ ಮೂರನೇ ಎರಡು ಪಾಲು ಮಾತ್ರ ಶರಾಬು ಇತ್ತು. ಉಳಿದ ಭಾಗದಲ್ಲಿ ಏನೆಲ್ಲ ಕಸಕಡ್ಡಿ ಗಳನ್ನು ತುಂಬಿಸಿಟ್ಟಿರುವಿಯೋ ಯಾರಿಗೆ ಗೊತ್ತು? ಹೂಂ, ಹೇಳು. ಬರಿದಾದ ಬಳಿಕವೂ ಇಷ್ಟು ಭಾರವಿರಬೇಕಾದರೆ ಈ ಪೀಪಾಯಿಯೊಳಗೆ ಏನು ತುಂಬಿರುವೆ?'

ತನಗೇನೂ ತಿಳಿದಿಲ್ಲವೆಂದು ಯಹೂದಿ ಸ್ಪಷ್ಟವಾಗಿ ತಿಳಿಸಿಬಿಟ್ಟ. ಆಗ ಅವರು ನನ್ನೊಡನೆ ಕೇಳಿದರು. ನಾನು ಅದೇ ನೆವವನ್ನು ಎದುರೊಡ್ಡಿದೆ. 'ಆಗಲಿ; ನಾನೇ ನಿಮ್ಮೆದುರಿಗೆ ಅದರ ಬಾಯಿ ತೆರೆಯಿಸುತ್ತೇನೆ. ಆಗ ನಿಮ್ಮ ಮೋಸವೆಲ್ಲ ಬಯಲಾಗುವುದು.'

ಇಬ್ಬರು ಸೇವಕರು ಉಪಕರಣ ತರಲು ಓಡಿದರು. ಅವರು ಹಿಂದಿರುಗುತ್ತಲೇ ಆ ಪೀಪಾಯಿಯ ಮುಚ್ಚಳ ತೆರೆಯಲು ನನಗೆ ಅಜ್ಞಾಪಿಸಿದರು. ಈಗ ನನ್ನ ಕಣ್ಣೆದುರಿಗೆ ಮೃತ್ಯು ನಲಿದಾಡುತ್ತಿತ್ತು. ಆಗಾಖಾನರ ಸಿಟ್ಟು ನನಗಿಂತಲೂ ನನ್ನ ಮಾಲಿಕನ ಮೇಲೆಯೇ ಹೆಚ್ಚಾಗಿದೆ ಎಂಬುದೇ ನನಗಿದ್ದ ಅಲ್ಪ ಸ್ವಲ್ಪ ಧೈರ್ಯ. ಆದರೆ ನೀಗ್ರೋವಿನ ಹೆಣ ಕಾಣುತ್ತಲೇ ನನ್ನ ಮಾಲಿಕನು ನಾನೇ ಕೊಲೆಗೆಡುಕನೆಂದು ತಿಳಿಸುವನಲ್ಲ- ಎಂಬ ಭಯವಿದ್ದೇ ಇತ್ತು.

ನಡುಗುವ ಕೈಗಳಿಂದ ಖಾನರ ಅಪ್ಪಣೆಯನ್ನು ನಾನು ಪರಿಪಾಲಿಸಿದೆ. ಪೀಪಾಯಿಯ ಮುಚ್ಚಳವನ್ನು ಕತ್ತರಿಸಿ ತೆಗೆಯಲಾಯಿತು. ಹೆಣವನ್ನು ಕಂಡು ಎಲ್ಲರೂ ಭಯಗ್ರಸ್ತರಾದರು. ಆದರೆ ಇಷ್ಟು ದಿನಗಳ ವರೆಗೆ ಶರಾಬಿನಲ್ಲಿ ಮುಳುಗಿದ್ದುದರಿಂದ ಹೆಣವು ಬಿಳಿದಾಗಿತ್ತು. ನಾನದನ್ನು ನೋಡುತ್ತಲೇ ಚಿಟ್ಟನೆ ಚೀರಿ ಹಿಂದೆ ಸರಿದೆ. ಹೀಗಾಗಿ ನನ್ನ ಮೇಲೆ ಅಷ್ಟು ಸಂದೇಹವಾಗಲಿಲ್ಲ.

'ದೇವ! ನಾನಿದೇನನ್ನು ನೋಡುತ್ತಿದ್ದೇನೆ? ಹೆಣ! ಹಾಯ್; ನನಗಿದರ ಕುರಿತು ಏನೂ ತಿಳಿದಿಲ್ಲ; ಚೇರಿಸ್; ಇದರ ವಿಚಾರವಾಗಿ ನಿನಗೆ ಗೊತ್ತಿದೆಯೋ?' ಎಂದು ಮಾಲಿಕನು ಪ್ರಶ್ನಿಸಿದ.

ನನಗೂ ಹೆಣದ ಕುರಿತು ತಿಳಿದಿಲ್ಲವೆಂದು ಆಣೆಯಿಟ್ಟು ಹೇಳಿದೆ. ನಾವು ಹೀಗೆ ಮಾತಾಡುತ್ತಿದ್ದಾಗಲೆಲ್ಲ ಖಾನರ ದೃಷ್ಟಿ ನನ್ನ ಮಾಲಿಕನ ಮೇಲೆಯೇ ಸ್ಥಿರವಾಗಿತ್ತು. ಅವರು ಮಿತಿಮೀರಿದ ಸಿಟ್ಟಿನಿಂದ ಮಾಲಿಕನನ್ನು ದಿಟ್ಟಿಸುತ್ತಿದ್ದರು. ಉಳಿದವರು ಸುಮ್ಮನೆ ನಿಂತಿದ್ದರೂ ಸಂದರ್ಭ ಸಿಕ್ಕರೆ ಮಾಲಿಕನನ್ನು ಪುಡಿ ಪುಡಿ ಮಾಡಿಬಿಡುವರೆಂದು ನನಗೆ ಭಾಸವಾಗುತ್ತಿತ್ತು.

'ಕಾಫಿರ್; ಅಲ್ಲಾನ ಭಕ್ತರಿಗೆ ಇದೇ ರೀತಿಯ ಶರಾಬು ಕೊಡುತ್ತಿರುವೆಯಾ?'—ಆಗಾ ಪ್ರಶ್ನಿಸಿದರು. 'ಹುಜೂರ್; ಜಿಹೋವಾನ ಸಾಕ್ಷಿಯಾಗಿಯೂ ನಾನು ಈ ಹೆಣದ ವಿಚಾರವಾಗಿ ಏನೂ ತಿಳಿದಿಲ್ಲ. ಇರಲಿ; ನಾನು ಸಂತೋಷದಿಂದ ಇದರ ಬದಲು ಇನ್ನೊಂದು ಪೀಪಾಯಿಯನ್ನು ನಿಮಗೆ ಪುಕ್ಕಟೆಯಾಗಿ ಕೊಡುತ್ತೇನೆ.'—ಮಾಲಿಕನೆಂದ.

'ಹಾಗೆಯೇ ಆಗಲಿ; ನನ್ನ ಸೇವಕರು ನಿನ್ನ ಅಂಗಡಿಯಿಂದ ಇನ್ನೊಂದು ಪೀಪಾಯಿಯನ್ನು ಹೊತ್ತು ತರುತ್ತಾರೆ.' ಎಂದು ಹೇಳಿ ಅವರು ತಮ್ಮ ಸೇವಕರಿಗೆ ಅಪ್ಪಣೆಯಿತ್ತರು; ತುಸು ಹೊತ್ತಿನಲ್ಲಿ ಆ ಎರಡನೆಯ ಪೀಪಾಯಿಯೂ ಬಂದು ಬಿಟ್ಟಿತು.

'ನನ್ನಂತಹ ಬಡ ವ್ಯಾಪಾರಿಗೆ ಇದೊಂದು ಹೆಚ್ಚಿನ ನಷ್ಟದ ವಿಚಾರ! ಒಂದು ಪೀಪಾಯಿ ಉತ್ತಮ ಶರಾಬು ವ್ಯರ್ಥವಾಗಿ ಹೋದಂತಾಯಿತು.'—ಶರಾಬಿನ ಪೀಪಾಯಿಯನ್ನು ಕಂಡು ಮಾಲಿಕನೆಂದ. ನಾವಿಬ್ಬರೂ ಹೊರಡಲನುವಾದೆವು.

'ನಿಲ್ಲು; ನಿನ್ನ ಶರಾಬನ್ನು ಸುಲಿಗೆ ಮಾಡುವ ಇಚ್ಛೆ ನನಗಿಲ್ಲ'—ಖಾನರು ಏರುದನಿಯಲ್ಲಿ ಹೇಳಿದರು. 'ಅಂದರೆ. . . .? ಇದಕ್ಕೂ ನೀವು ಹಣ ಕೊಡುವಿರಾ? ನೀವು ತುಂಬಾ ವಿಚಾರಶೀಲರು.' ಮಾಲಿಕ ಹಿರಿಹಿರಿ ಹಿಗ್ಗುತ್ತ ಹೇಳಿದ. 'ಅದನ್ನು ನೀನೀಗಲೇ ನೋಡುವೆ'—ಎಂದು ಖಾನರು ಪೀಪಾಯಿಯ ಶರಾಬನ್ನೆಲ್ಲ ತೆಗೆಯಿಸಿದರು. ಬಳಿಕ ಪೀಪಾಯಿಯ ಮುಚ್ಚಳ

ತೆಗೆಯುವಂತೆ ನನಗೆ ತಿಳಿಸಿದರು. ಮುಚ್ಚಳ ತೆಗೆದೊಡನೆಯೇ ಖಾನರು ನನ್ನ ಮಾಲಿಕನನ್ನು ಆ ಖಾಲಿ ಪೀಪಾಯಿಯೊಳಗೆ ತುರುಕಿಸುವಂತೆ ತಮ್ಮ ಸೇವಕರಿಗೆ ಅಪ್ಪಣೆಯಿತ್ತರು. ನಾನು ತುಂಬಾ ವಿನಂತಿಸಿಕೊಂಡೆ. ಏಕೆಂದರೆ ಮಾಲಿಕನ ವಿರುದ್ಧ ನನ್ನನೇನೂ ದೂರಿದ್ದಿಲ್ಲ; ಅಲ್ಲದೆ ನಿರಪರಾಧಿಗೆ ಶಿಕ್ಷೆ ಸಿಗುತ್ತದಲ್ಲ ಎಂಬ ಮರುಕವೂ ನನಗಿತ್ತು. ಆದರೆ ಇದು ಜೀವನ ಮರಣಗಳ ಪ್ರಶ್ನೆಯಲ್ಲವೆ? ಅಲ್ಲದೆ ಆ ಕಾಲದಲ್ಲಿ ಪ್ರತಿಯೊಬ್ಬನೂ ತನ್ನ ಹಿತನ್ನೇ ನೋಡುತ್ತಿದ್ದ. ಆತ್ಮರಕ್ಷಣೆಯೇ ಪ್ರತಿಯೊಬ್ಬನ ಗುರಿಯಾಗಿತ್ತು. ಇಷ್ಟೇ ಅಲ್ಲದೆ ಮಾಲಿಕನು ನನ್ನನ್ನು ತನ್ನ ಉತ್ತರಾಧಿಕಾರಿಯಾಗಿ ನಿಯಮಿಸಿದ ದಸ್ತಾವೇಜೂ ನನ್ನ ಕಿಸೆಯಲ್ಲಿತ್ತು. ಮಾಲಿಕನ ಎಲ್ಲ ಸಂಪತ್ತಿಯೂ ಈಗ ನನಗೇ ಸಿಗುವುದರಲ್ಲಿತ್ತು. ಅಲ್ಲದೆ........"

ಆಗಲೇ ಪಾಶಾರು ನನ್ನನ್ನು ತಡೆದು—"ಕಾರಣ ತಿಳಿಸುವ ಅಗತ್ಯವಿಲ್ಲ. ಮಾಲಿಕನನ್ನು ಪೀಪಾಯಿಯೊಳಗೆ ತುಂಬಿಸಬೇಕಾಗಿ ಬಂದಿತಲ್ಲವೆ? ಮುಂದೆ........" ಎಂದರು.

"ಹೌದು ಸ್ವಾಮಿ, ನಾನು ಖಾನರ ಅಪ್ಪಣೆಯನ್ನು ಮೀರದಾದೆ. ಆದರೆ ಆಗ ನನ್ನಮನಸ್ಸು ತುಂಬಾ ನೊಂದಿತ್ತು. ಅಲ್ಲದೆ ನನ್ನ ಭಾಗ್ಯದಲ್ಲೇನು ಬರೆದಿದೆಯೆಂದು ನನಗೆ ತಿಳಿದಿಲ್ಲವೆಂಬುದೂ ನನ್ನ ದುಃಖಕ್ಕೆ ಕಾರಣವಾಗಿತ್ತು. ಶರಾಬು ತುಂಬಿಸಲು ತುಸು ಅಳುಕಿದಾಗ ಖಾನರು ಗರ್ಜಿಸುತ್ತ........'ಹೂಂ; ಬೇಗನೆ ತುಂಬಿಸು!' ಎಂದರು. ನಾನು ಅವರ ಅಪ್ಪಣೆಯನ್ನು ಈಡೇರಿಸಿ ನಡುಗುತ್ತ ಎದುರು ನಿಂತೆ. 'ನಿನಗೆ ಈ ವಿಷಯವಾಗಿ ಏನು ಗೊತ್ತಿದೆ?

ಖಾನರು ನನ್ನ ಮಾಲಿಕನ ಪ್ರಾಣಗಳನ್ನೇನೋ ಹೀರಿಬಿಟ್ಟರು. ಇನ್ನು ನಾನು ಅವನ ವಿಚಾರವಾಗಿ ದೂರಿಟ್ಟರೆ ನಷ್ಟವೇನು?—ಎಂದು ನಾನು ಮನದಲ್ಲೇ ಯೋಚಿಸಿ ಹೀಗೆಂದೆ—"ಏನೂ ಇಲ್ಲ. ಒಂದು ದಿನ, ನಮ್ಮಲ್ಲಿ ಕೆಲಸಮಾಡುತ್ತಿದ್ದ ನೀಗ್ರೋ ಕಾಣೆಯಾದ. ಮಾಲಿಕನು ಅಲ್ಪಸ್ವಲ್ಪ ಹುಡುಕಾಡಿದ. ಬಹುಶಃ ಅವನನ್ನು ಮಾಲಿಕನೇ ಕೊಂದುಹಾಕಿರಬೇಕು. ಅಲ್ಲದೆ ನೀವು ಈ ಪೀಪಾಯಿಯನ್ನು ಹೊತ್ತುತಂದಾಗ ಮಾಲಿಕನು ತುಂಬಾ ಕಳವಳಗೊಂಡಿದ್ದ. ಆ ಶರಾಬನ್ನು ತನಗಾಗಿಯೇ ಸಿದ್ಧಗೊಳಿಸಿದ್ದೆನೆಂದು ಅವನೆನ್ನುತ್ತಿದ್ದ."

‘ದುಷ್ಟ ಯಹೂದಿ, ಅವನು ಹೀಗೆಯೇ ನೂರಾರು ಜನರನ್ನು ಕೊಲೆಗೈದಿರಬೇಕೆಂದು ನನಗೆನಿಸುತ್ತಿದೆ,’—ಖಾನರು ಹಲ್ಲು ಕಡಿಯುತ್ತ ಹೇಳಿದರು.

‘ನನಗೂ ಅದೇ ಸಂಶಯ; ಮುಂದಿನ ಸಲ ನನ್ನ ಸರತಿಯಿತ್ತು. ನಾನು ಕೆಲಸಬಿಟ್ಟು ಹೊರಡುವ ಮಾತೆತ್ತಿದಾಗಲೆಲ್ಲ ಮಾಲಿಕನು ನನ್ನನ್ನು ತಡೆಯಲೆತ್ನಿಸುತ್ತಿದ್ದ. ಇಲ್ಲಿ ನೋಡಿ, ನನ್ನನ್ನು ನಿಲ್ಲಿಸಿಕೊಳ್ಳಲೆಂದು ಅವನು ನನ್ನನ್ನು ತನ್ನ ಪಾಲುಗಾರನನ್ನಾಗಿಯೂ ಮಾಡಿಟ್ಟಿದ್ದಾನೆ. ಆದರೆ ಈ ಸುಖ ಹೆಚ್ಚು ದಿನಗಳ ವರೆಗೆ ನನಗೆ ಸಿಗಲಾರದೆಂದು ಕಾಣುತ್ತದೆ......’

‘ನಿನ್ನ ಅದೃಷ್ಟ ಒಳ್ಳೆಯದೆನ್ನಬೇಕು. ಕೆಲವು ಶರ್ತಗಳ ಮೇಲೆ ನೀನೀಗ ಯಹೂದಿ ಮಾಲಿಕನ ವ್ಯಾಪಾರದ ಪೂರ್ಣ ಹಕ್ಕುದಾರನಾಗಬಹುದು. ಮೊದಲನೇ ಶರ್ತದ ಪ್ರಕಾರ ಯಹೂದೀ ಮಾಲಿಕನ ಹೆಣವಿರುವ ಈ ಪೀಪಾಯಿಯನ್ನು ನೀನು ಯಾವಾಗಲೂ ನಿನ್ನ ಬಳಿಯೇ ಇಟ್ಟುಕೋ. ಏಕೆಂದರೆ ಅದನ್ನು ನೋಡಿದಾಗಲೆಲ್ಲ ನನಗೆ ನನ್ನ ಪ್ರತೀಕಾರದ ನೆನಪಾಗುತ್ತಿರಲಿ. ಎರಡನೆಯದಾಗಿ ಈ ಮತ್ತೊಂದು ಪೀಪಾಯಿಯೂ ನಿನ್ನ ಬಳಿಯೇ ಇರಲಿ; ಅದನ್ನು ನೋಡುವಾಗ ನನಗೆ ಯಾವಾಗಲೂ ಸಿಟ್ಟು ಬಂದೇ ಬರುವುದು. ಮೂರನೇ ಶರ್ತದಂತೆ ನಾನು ಶರಾಬು ಕೇಳಿದಾಗಲೆಲ್ಲ ಉತ್ಕೃಷ್ಟವಾದ ಶರಾಬನ್ನು ಪುಕ್ಕಟೆಯಾಗಿ ನನಗೆ ಕಳುಹಿಸಿ ಕೊಡಬೇಕು. ನಿನಗೆ ಈ ಶರ್ತಗಳು ಒಪ್ಪಿಗೆಯೆ? ಅಥವಾ ಮಾಲಿಕನ ದುಷ್ಕೃತ್ಯದಲ್ಲಿ ನೀನೂ ಸೇರಿರುವೆಯೆಂದು ನಾನು ತೀರ್ಮಾನಿಸಲೇ?’

ನಾನು ಸಂತೋಷದಿಂದ ಆ ಎಲ್ಲಾ ಶರ್ತಗಳನ್ನು ಒಪ್ಪಿಕೊಂಡೆ. ಯಹೂದಿಯರನ್ನು ಜನರು ಹೆಚ್ಚು ಲಕ್ಷಿಸುವುದಿಲ್ಲ. ಎಂದಾದರೂ ಜನರು ಮಾಲಿಕನ ವಿಚಾರವಾಗಿ ನನ್ನನ್ನು ಪ್ರಶ್ನಿಸಿದಾಗ ಆಗಾಖಾನರು ಅವನನ್ನು ಸೆರೆಯಲ್ಲಿಟ್ಟಿದ್ದಾರೆಂದೂ, ಅವನು ಜೈಲಿನಿಂದ ಹಿಂದಿರುಗುವ ವರೆಗೆ ನಾನೇ ವ್ಯಾಪಾರದ ಮೇಲ್ವಿಚಾರಕನಾಗಿರುವೆನೆಂದೂ ಸುಳ್ಳುಹೇಳುತ್ತಿದ್ದೆ.

ಖಾನರ ಶರ್ತಗಳಂತೆ ಹೆಣಗಳಿರುವ ಎರಡೂ ಪೀಪಾಯಿಗಳನ್ನು ಸ್ವಲ್ಪ ಎತ್ತರದಲ್ಲಿ ಇಟ್ಟುಬಿಟ್ಟಿದ್ದೆ. ಖಾನರು ಆಗಾಗ್ಗೆ ಬಂದು ಅವೆರಡನ್ನು ನೋಡಿ ತೃಪ್ತಿ ತಾಳುತ್ತಿದ್ದರು. ಅಲ್ಲದೆ ಪುಕ್ಕಟೆಯಾಗಿ ಸಿಗುವ ಶರಾಬನ್ನು

ಮಿತಿಮೀರಿ ಕುಡಿದು ಮತ್ತರಾಗಿ ಇರುಳಿಡೀ ನಮ್ಮ ಅಂಗಡಿಯಲ್ಲೇ ಬಿದ್ದಿರುತ್ತಿದ್ದರು.

ನಾನು ಗುಟ್ಟಾಗಿ ಆ ಎರಡೂ ಪೀಪಾಯಿಗಳ ಶರಾಬಿನಿಂದ ತುಂಬಾ ಲಾಭಗಳಿಸಿದೆ. ನಾನು ಕೆಳಗಿನಿಂದ ಅವುಗಳ ಶರಾಬು ತೆಗೆದು ಮೇಲಿನಿಂದ ಹೊಸ ಶರಾಬು ತುಂಬಿಸುತ್ತಿದ್ದೆ. ಕೆಲವೇ ದಿನಗಳಲ್ಲಿ ನನ್ನಲ್ಲಿರುವ ಎಲ್ಲಾ ಶರಾಬು ಆ ಹೆಣಗಳ ಸಂಪರ್ಕದಿಂದ ಹೊಸ ಸವಿ ಪಡೆದಿತ್ತು. ಹೀಗಾಗಿ ನನ್ನ ವ್ಯಾಪಾರ ದಿನದಿನಕ್ಕೆ ಅಭಿವೃದ್ಧಿಹೊಂದುತ್ತಿತ್ತು. ನಾನು ಶ್ರೀಮಂತ ನಾಗತೊಡಗಿದೆ.

ಮೂರು ವರ್ಷಗಳ ವರೆಗೆ ಎಲ್ಲ ಕೆಲಸವೂ ಸುಸೂತ್ರವಾಗಿ ಸಾಗಿತ್ತು. ಈ ನಡುವೆ ಖಾನರು ಎರಡುಮೂರು ದಿನಗಳಿಗೊಮ್ಮೆ ತಪ್ಪದೆ ಬರುತ್ತಿದ್ದರು. ಆಗಲೇ ಸೇನೆಯೊಂದಿಗೆ ರಾಜಧಾನಿಗೆ ಬರಬೇಕೆಂದು ಅವರಿಗೆ ಸುಲ್ತಾನರ ಅಜ್ಞಾಪತ್ರವು ಸಿಕ್ಕಿತು. ಖಾನರ ಗೆಳೆತನದಿಂದ ನನಗೂ ಶರಾಬು ಕುಡಿಯುವ ಚಟ ಅಂಟಿಕೊಂಡಿತ್ತು. ಒಂದು ದಿನ ಸಂಜೆಯ ವೇಳೆಗೆ ಸೇನೆಯೊಂದಿಗೆ ಆಗಾಖಾನರು ಹೊರಟರು. ನನ್ನ ಅಂಗಡಿಯ ಬಳಿ ಬಂದಾಗ ಅವರು ಮಾತ್ರ ಕೆಳಗಿಳಿದರು. ಸೇನೆ ಮುಂದರಿಯಿತು. ಸ್ವಲ್ಪ ಶರಾಬು ಕುಡಿದು ವೇಗವಾಗಿ ಸಾಗಿ ಮತ್ತೆ ಸೈನ್ಯವನ್ನು ಕೂಡಿಕೊಳ್ಳಬಹುದೆಂದು ಅವರ ಯೋಚನೆ. ತಮ್ಮ ಅರಬೀ ಕುದುರೆಯಿಂದ ಕೆಳಗಿಳಿದು ಖಾನರು ಒಳಬಂದರು. ಒಂದರ ಮೇಲೊಂದರಂತೆ ಗ್ಲಾಸು ಬರಿದಾಗುತ್ತಿತ್ತು. ಸಮಯವೂ ಕಳೆಯುತ್ತಿತ್ತು. 'ಯಹೂದೀ ಮಾಲಿಕನ ಪೀಪಾಯಿಯನ್ನು ನೋಡಬಯಸುತ್ತೇನೆ'ಂದು ಖಾನರು ಎಂದಿನಂತೆಯೇ ಹೇಳಿದರು. ಇಷ್ಟು ದಿನಗಳೊಳಗೆ ನಾವಿಬ್ಬರೂ ಆಪ್ತ ಮಿತ್ರರಾಗಿದ್ದೆವು; ಅಲ್ಲದೆ ಅಂದು ನಾನು ಮಿತಿಮೀರಿ ಕುಡಿದಿದ್ದೆ. ನಾಸಾ ಅಮಲಿನಲ್ಲೇ ಹೇಳಿದೆ—'ಸಾಹೇಬರೇ, ಈಗ ನೀವು ನನ್ನ ಮಾಲಿಕನನ್ನು ನಿಂದಿಸಬೇಡಿ, ಅವನಿಂದಲೇ ನನ್ನ ಅದೃಷ್ಟ ತೆರೆಯಿತು. ಈಗ ನೀವಂತೂ ಹೋಗುತ್ತಿದ್ದೀರಿ. ಆದ್ದರಿಂದ ಒಂದು ರಹಸ್ಯವನ್ನು ಹೊರಗೆಡಹಬೇಕೆಂದಿದ್ದೇನೆ. ಆ ಹೆಣಗಳ ಸಂಪರ್ಕವಿಲ್ಲದ ಒಂದು ಹನಿ ಶರಾಬು ಕೂಡ ನನ್ನ ಅಂಗಡಿಯಲ್ಲಿಲ್ಲ. ಬೇರೆಯವರಿಗಿಂತ ನನ್ನ ಶರಾಬು ಉತ್ಕೃಷ್ಟವೆನಿಸಲು ಇದೇ ಕಾರಣ.'

'ಏನೆಂದೆ.......'—ಅವರ ನಾಲಿಗೆ ತಡವರಿಸುತ್ತಿತ್ತು. 'ಆಗಲಿ, ದುಷ್ಟನೆ! ನೀನೂ ನಿನ್ನ ಮಾಲಿಕನಂತೆ ಸಾಯಲು ಸಿದ್ಧನಾಗು. ಅರೆ, ಅಲ್ಲಾ! ಈ ದುಷ್ಟರು ನಮ್ಮ ಧರ್ಮವನ್ನು ಹೇಗೆ ಭ್ರಷ್ಟಗೊಳಿಸುತ್ತಿದ್ದಾರೆ! ಅಪವಿತ್ರ ಯಹೂದಿಯ ಕೊಳೆತ ಮಾಂಸದಿಂದಾದ ಶರಾಬನ್ನು ಕುಡಿಸಿದ್ದಾನೆ! ಇಂದೇ ನಿನಗೆ ಕೊನೆಗಾಲ!'

ಖಾನರು ನನ್ನನ್ನು ಹಿಡಿಯಲೆಂದು ಮುಂದರಿದರು. ಆದರೆ ಕಾಲು ಜಾರಿ ಧೊಪ್ಪನೆ ಬಿದ್ದುಬಿಟ್ಟರು. ಈಗ ಅವರಿಗೆ ಏಳುವಷ್ಟು ಶಕ್ತಿಯಿದ್ದಿಲ್ಲ. ಎಚ್ಚರವಾದಾಗಲೂ ಅವರು ಈ ಮಾತನ್ನು ಮರೆಯಲಾರರೆಂದೂ, ನಾನು ಸಾಯಬೇಕಾಗುವುವೆಂದೂ ಸ್ಪಷ್ಟವಾಗಿ ತಿಳಿದಿದ್ದೆ. ಮೃತ್ಯುಭಯ ಹಾಗೂ ಶರಾಬಿನ ಅಮಲು ನನಗೆ ದಾರಿತೋರಿಸಿದುವು. ನಾನು ಕೂಡಲೇ ಒಂದು ಖಾಲಿ ಪೀಪಾಯಿಯಲ್ಲಿ ಖಾನರನ್ನು ತುರುಕಿಸಿ ಬಾಯಿಮುಚ್ಚಿಬಿಟ್ಟೆ. ಅಲ್ಲದೆ ಅದರಲ್ಲೂ ಶರಾಬು ತುಂಬಿಸಿಬಿಟ್ಟೆ. ಹೀಗೆ ನಾನು ಮಾಲಿಕನ ಮೃತ್ಯುವಿನ ಸೇಡು ತೀರಿಸಿ ಆತ್ಮರಕ್ಷಣೆಯನ್ನು ಮಾಡಿಕೊಂಡೆ."

"ಏನೆಂದೆ? ಇಸ್ಲಾಂ ಮತದ ಭಕ್ತನೊಬ್ಬನನ್ನು ಪೀಪಾಯಿಯಲ್ಲಿ ತುರುಕಿಸಿ ಕೊಂದುಹಾಕಿದೆಯಾ? ನೀಚ ಕಾಫಿರ್! ನೀನಿದನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತಿ!! ಯಾರಲ್ಲಿ? ಕಟುಕರನ್ನು ಕರೆ"—ಪಾಶಾ ಸಾಹೇಬರು ಹೇಳಿದರು.

"ಹುಜೂರ್; ನನ್ನ ಮೇಲೆ ದಯೆದೋರಿರಿ; ನೀವು ಕುರಾನಿನ ಆಣೆಯಿಟ್ಟು ನನಗೆ ಜೀವದಾನ ಮಾಡಿಲ್ಲವೆ? ಅಲ್ಲದೆ ಶರಾಬು ಕುಡಿಯುವ ಆಗಾಖಾನರು ಇಸ್ಲಾಮಿನ ಭಕ್ತರೆಂತಾದಾರು? ಕಟ್ಟರ್ ಮುಸಲ್ಮಾನರು ಶರಾಬನ್ನು ಮುಟ್ಟುವುದೂ ಇಲ್ಲವಷ್ಟೆ"—ಗ್ರೀಕನೆಂದ.

"ನಾನು ಕ್ಷಮಿಸುವೆನೆಂದು ಮಾತುಕೊಟ್ಟುದು ನಿಜ; ಅದರಂತೆ ನೀಗ್ರೋವಿನ ಕೊಲೆಯನ್ನು ಕ್ಷಮಿಸಿದ್ದೇನೆ. ಆದರೆ ಖಾನರ ಕೊಲೆ ಬಹು ದೊಡ್ಡ ಅಪರಾಧ'—ಪಾಶಾರೆಂದರು.

"ಹುಜೂರ್, ನೀವು ನನ್ನ ಮೇಲೆ ತುಂಬಾ ಸಿಟ್ಟಾಗಿದ್ದೀರಿ. ಆದರೆ ನಾನು ನಿಮ್ಮೆದುರಿಗೆ ಎರಡು ವಿಚಾರಗಳನ್ನು ಅರಿಕೆಮಾಡಿಕೊಳ್ಳುತ್ತೇನೆ. ಮೊದಲನೆಯದಾಗಿ ನೀವು ಯಾವ ಶರ್ತವೂ ಇಲ್ಲದೆ ನನ್ನನ್ನು ಬಿಡುಗಡೆ

ಮಾಡುವುದಾಗಿ ಹೇಳಿದ್ದೀರಿ. ಎರಡನೆಯದಾಗಿ ಪವಿತ್ರ ಕುರಾನಿನ ಆಣೆಯಿಟ್ಟು ನುಡಿದಿದ್ದೀರಿ."

"ಆದರೆ ಇದನ್ನೇಕೆ ನಾನು ಲಕ್ಷಿಸಲಿ? ಇಸ್ಲಾಂ ಭಕ್ತನೆದುರಿಗೆ ಮಾಡಿದ್ದ ಪ್ರತಿಜ್ಞೆಯಾಗಿದ್ದರೆ ಒಪ್ಪಲೇ ಬೇಕಿತ್ತು."

"ನನ್ನ ಕತೆಯಿನ್ನೂ ಪೂರ್ಣವಾಗಿಲ್ಲ. ಇದು ನಿಮಗೆ ಮನೋರಂಜಕವೆನಿಸಿದರೆ ನನ್ನ ಕತೆ ಮುಗಿದ ಬಳಿಕವೇ ತೀರ್ಮಾನ ಕೊಡಬಹುದು"—ಗ್ರೀಕನೆಂದ.

"ಸರಿ, ನಿನ್ನ ಕತೆ ಮುಂದುವರಿಯಲಿ."

ಆದರೆ ಗ್ರೀಕನು ಮಾತಾಡಲೇ ಇಲ್ಲ. ಪಾಶಾರು ಪುನಃ ಕುರಾನಿನ ಆಣೆಯಿಟ್ಟು ಅವನಿಗೆ ಅಭಯದಾನ ಮಾಡಿದರು. ಈಗ ಅವರ ಸಿಟ್ಟು ತಣಿದು, ಮುಂದಿನ ಕತೆಕೇಳುವ ಉತ್ಸಾಹವುಂಟಾಗಿತ್ತು.

ಚೇರಿಸ್ ತನ್ನ ಕತೆ ಮುಂದರಿಸಿದ...."ಪೀಪಾಯಿಯನ್ನು ಮುಚ್ಚಿ ನಾನು ಅಂಗಳಕ್ಕಿಳಿದೆ. ಅಲ್ಲಿ ಆಗಾಖಾನರ ಕುದುರೆಯಿತ್ತು. ನಾನು ಖಾನರ ಖಡ್ಗದಿಂದಲೇ ಕುದುರೆಯನ್ನು ಚೆನ್ನಾಗಿ ಗಾಯಗೊಳಿಸಿ, ಅದರ ಹಗ್ಗವನ್ನು ಕಳಚಿಬಿಟ್ಟೆ. ಅದು ನಾಗಾಲೋಟದಿಂದ ಓಡುತ್ತ ಖಾನರ ಮನೆಗೆ ಮರಳಿತು. ನೀರವ ರಾತ್ರಿಯಲ್ಲಿ ಕುದುರೆಯ ಖುರಪುಟವನ್ನು ಕೇಳಿ ಮನೆಯವರೆಲ್ಲ ಎಚ್ಚತ್ತರು. ಕುದುರೆಯ ದುಃಸ್ಥಿತಿಯನ್ನು ಕಂಡಾಗ, ಶತ್ರುಗಳು ಖಾನರನ್ನು ಕೊಲೆಗೈದಿರಬೇಕೆಂದು ಅವರರಿತರು. ಖಾನರು ನಮ್ಮಲ್ಲಿಂದ ಯಾವಾಗ ತೆರಳಿದ್ದರೆಂದು ಕೇಳಲು ಕೆಲಜನರು ನನ್ನ ಅಂಗಡಿಗೂ ಬಂದರು. ಕತ್ತಲೆಯಾಗಿ ಒಂದು ಗಂಟೆಯ ಬಳಿಕ ಖಾನರು ನನ್ನ ಅಂಗಡಿಯಿಂದ ಹೊರಟಿದ್ದರೆಂದೂ ವಿಶೇಷ ಕುಡಿದಿದ್ದರಿಂದ ಖಡ್ಗವನ್ನು ಇಲ್ಲೇ ಬಿಟ್ಟುಹೋಗಿದ್ದರೆಂದೂ ತಿಳಿಸಿದೆ. ನಾನು ಆ ಖಡ್ಗವನ್ನು ಸ್ವಚ್ಛಗೊಳಿಸಿ ಹಿಂದಿರುಗಿಸಿದೆ. ಖಾನರ ಮನೆಯವರಿಗೆ ಸ್ವಲ್ಪವೂ ಸಂಶಯವಾಗಲಿಲ್ಲ, ದಾರಿಯಲ್ಲೆಲ್ಲೋ ಆಗಾಖಾನರ ಕೊಲೆಯಾಗಿದ್ದಿರಬೇಕೆಂದು ಅವರೆಲ್ಲ ನಿಷ್ಕರ್ಷಿಸಿದರು.

ಈ ರೀತಿ ನಾನು ಆ ಭಯಂಕರ ಮಿತ್ರನಿಂದಲೂ ಬಿಡುಗಡೆಹೊಂದಿದೆ. ಖಾನರ ದೇಹದಿಂದ ಶರಾಬು ತಯಾರಿಸಿ, ಅವರು ನನ್ನಿಂದ ಪುಕ್ಕಟೆಯಾಗಿ

ಪಡೆದ ಶರಾಬಿನ ಬೆಲೆಯನ್ನೆಲ್ಲ ಬಡ್ಡಿ ಸಮೇತವಾಗಿ ವಸೂಲುಮಾಡಿದೆ. ಅವರ ದೇಹವಿದ್ದ ಪೀಪಾಯಿಯನ್ನು ಮೊದಲಿದ್ದ ಆ ಎರಡು ಪೀಪಾಯಿಗಳೊಟ್ಟಿಗೇ ಇಟ್ಟು ಬಿಟ್ಟೆ. ಈಗ ನನ್ನ ವ್ಯಾಪಾರ ಮೊದಲಿಗಿಂತಲೂ ಹೆಚ್ಚು ಅಭಿವೃದ್ಧಿಹೊಂದಿತು. ಅಲ್ಲದೆ ನನ್ನ ಶರಾಬಿನ ಕೀರ್ತಿ ಎಲ್ಲೆಡೆಯಲ್ಲೂ ಪಸರಿಸಿತು.

ಒಂದು ದಿನ ನನ್ನ ಶರಾಬಿನ ಕೀರ್ತಿ ಕೇಳಿ ನ್ಯಾಯಾಧೀಶರು ಗುಟ್ಟಾಗಿ ನನ್ನ ಅಂಗಡಿಗೆ ಕಾಲಿಟ್ಟರು. ನಾನು ಬಾಗಿ ನಮಸ್ಕರಿಸಿದೆ. ಅವರು ನನ್ನ ಗಿರಾಕಿಗಳಾಗಬೇಕೆಂದು ನನ್ನ ಬಹುದಿನದ ಬಯಕೆಯಿತ್ತು. ನಾನು ಶರಾಬಿನ ಗ್ಲಾಸನ್ನು ಅವರೆದುರಿಗಿಡುತ್ತಾ.... “ಹುಜೂರ್, ಇದು ‘ಅಗಾ ಶರಾಬ್’ ಇದನ್ನು ಅಗಾಖಾನರು ಬಹಳ ಮೆಚ್ಚುತ್ತಿದ್ದರು ಮತ್ತು ಈ ಶರಾಬಿನ ಪೀಪಾಯಿಯನ್ನೇ ಒಯ್ಯುತ್ತಿದ್ದರು....” ಎಂದೆ.

‘ಈ ಉಪಾಯ ಒಳ್ಳೆಯದೆ, ಆಗಾಗ್ಗೆ ಸೇವಕನನ್ನು ಕಳುಹಿಸುವುದಕ್ಕಿಂತ ಇದು ಎಷ್ಟೋ ಉತ್ತಮ. ನಾನೂ ಹೀಗೆಯೇ ಮಾಡುವೆ. ಆದರೆ ಮೊದಲು ನಿನ್ನ ಶರಾಬಿನ ಪರೀಕ್ಷೆಯಾಗಲಿ.’

ಅವರು ಅನೇಕ ಪೀಪಾಯಿಗಳ ಶರಾಬಿನ ರುಚಿ ನೋಡಿದರು. ಆದರೆ ನಾನು ಮೊದಲು ಕುಡಿಸಿದ ಶರಾಬಿನಷ್ಟು ಬೇರಾವುದೂ ರುಚಿಯಾಗಿರಲಿಲ್ಲ. ಬಳಿಕ ಅವರು ಎತ್ತರದಲ್ಲಿದ್ದ ಆ ಮೂರು ಪೀಪಾಯಿಗಳತ್ತ ದೃಷ್ಟಿಹರಿಸಿ.... ‘ಇವುಗಳೇನು?’ ಎಂದರು. ‘ಖಾಲಿ ಪೀಪಾಯಿಗಳು’... ನಾನೆಂದೆ.

ನ್ಯಾಯಾಧೀಶರು ಕೈಯಲ್ಲಿ ಬೆತ್ತ ಹಿಡಿದಿದ್ದರು. ಅದರಿಂದ ಪೀಪಾಯಿಗಳನ್ನು ಬಡಿದು ನೋಡಿ—‘ಸುಳ್ಳು ಹೇಳುತ್ತೀಯಾ? ಇವು ಬರಿದಲ್ಲವೆಂದು ಶಬ್ದದಿಂದ ತಿಳಿಯುತ್ತದೆ. ಎಲ್ಲಕ್ಕಿಂತಲೂ ಉತ್ತಮವಾದ ಶರಾಬು ಇವುಗಳಲ್ಲಿರಬೇಕು. ಹೂಂ, ನನಗೆ ಕೂಡಲೇ ಇವುಗಳಲ್ಲಿರುವ ಶರಾಬು ಕೊಡಿಸು’ ಎಂದರು. ನಾನು ಅವರ ಅಪ್ಪಣೆಯಂತೆಯೇ ನಡೆಯಬೇಕಾಯಿತು. ಅವರು ಅದನ್ನು ಸೇವಿಸಿ ಬಹಳ ರುಚಿಯಾಗಿದೆಯೆಂದು ತಿಳಿಸಿದರು. ಅಲ್ಲದೆ ತಾವು ಅಂತಹ ಎಲ್ಲ ಶರಾಬನ್ನು ಕೊಳ್ಳಲು ಸಿದ್ಧರಿದ್ದೇವೆಂದೂ ಹೇಳಿದರು. ‘ಆ ಶರಾಬು ಇತರ ಶರಾಬನ್ನು ರುಚಿಗೊಳಿಸುವುದಕ್ಕಾಗಿ ಉಪಯೋಗಿಸಲ್ಪಡುತ್ತದೆಂದೂ ಅದರ ಬೆಲೆ ತುಂಬಾ ಹೆಚ್ಚೆಂದೂ ತಿಳಿಸಿದೆ. ಅವರು ಬೆಲೆ ಕೇಳಿದಾಗ ನಾನು ಬೇರೆ ಶರಾಬಿನ ನಾಲ್ಕರಷ್ಟು ಬೆಲೆ ಹೇಳಿದೆ.

'ಆಗಲಿ, ಬೆಲೆಯೇನೋ ಹೆಚ್ಚು ನಿಜ. ಆದರೆ ಒಳ್ಳೇ ವಸ್ತುವಿಗೆ ಹೆಚ್ಚು ಬೆಲೆ ಕೊಡಲೇಬೇಕಾಗುತ್ತದೆ. ಇದು ವ್ಯಾಪಾರವಷ್ಟೆ; ಒಮ್ಮೆ ಅಗ್ಗ, ಮತ್ತೊಮ್ಮೆ ತುಟ್ಟಿ.'

ಈ ಪೀಪಾಯಿಗಳನ್ನು ಮಾರುವುದರಿಂದ ನನ್ನ ಶರಾಬು ಹಾಳಾಗುವುದೆಂದೂ ಶರಾಬಿನ ರುಚಿ ಹೆಚ್ಚಿಸಲು ಇದು ಅತ್ಯಗತ್ಯವೆಂದೂ ತಿಳಿಸಿದೆ. ಆದರೆ ಅವರು ಒಪ್ಪಲೇ ಇಲ್ಲ. ಎಷ್ಟು ಹಣ ಕೇಳಿದರೂ ಕೊಡಲು ಸಿದ್ಧನಿದ್ದೇನೆಂದು ಅವರೆಂದರು. ಹೀಗಾಗಿ ವ್ಯಾಪಾರ ನಡೆದೇ ಹೋಯಿತು. ನ್ಯಾಯಾಧೀಶರು ನೌಕರರ ಮೂಲಕ ಆ ಮೂರು ಪೀಪಾಯಿಗಳನ್ನು ಮನೆಗೊಯ್ದರು. ಹೀಗೆ ಮೂರು ಹೆಣಗಳು ನನ್ನ ಕೈತಪ್ಪಿದವು.

ಈಗ ಗುಟ್ಟು ಹೊರಬೀಳುತ್ತದೆಂದು ನಾನು ಊಹಿಸಿದೆ. ಆದ್ದರಿಂದ ನಾನು ಬೇಗನೆ ಅಲ್ಲಿಂದ ಕಂಬಿಕೀಳಲು ಮನಸ್ಸುಮಾಡಿದೆ. ನ್ಯಾಯಾಧೀಶರಿಂದ ಆ ಮೂರೂ ಪೀಪಾಯಿಗಳ ಬೆಲೆಯನ್ನು ಮೊದಲೇ ವಸೂಲು ಮಾಡಿದ್ದೆ. ಆ ಪೀಪಾಯಿಗಳಿಲ್ಲದೆ ಇನ್ನು ಶರಾಬಿನ ವ್ಯವಸಾಯ ಮಾಡುವುದು ಕಷ್ಟವೆಂದೂ ಅವುಗಳನ್ನು ಹಿಂದಿರುಗಿಸಿದರೆ, ಬದಲಿಗೆ ಮೂರು ಬೇರೆ ಪೀಪಾಯಿಗಳನ್ನು ಕಾಣಿಕೆಯಾಗಿ ಕೊಡುವೆನೆಂದೂ ತಿಳಿಸಿದೆ. ಆದರೆ ಅವರೊಪ್ಪಲೇ ಇಲ್ಲ. ಬಳಿಕ ನಾನು ಒಂದು ಹಡಗನ್ನು ಬಾಡಿಗೆ ಹಿಡಿದು ಉಳಿದ ಶರಾಬಿನೊಡನೆ ಹೊರಟೇಬಿಟ್ಟೆ. ಈ ರೀತಿ ನಾನು ಗುಟ್ಟು ಹೊರಬೀಳುವ ಮೊದಲೇ ಕಾರ್ಪೂರ್ದ್ವೀಪದತ್ತ ಸಾಗಿದೆ. ಆದರೆ ನಾವು ಭಯಂಕರ ಬಿರುಗಾಳಿಯನ್ನು ಎದುರಿಸಬೇಕಾಯಿತು. ನಾವು ಮುಂದರಿಯಲು ಅದೆಷ್ಟು ಯತ್ನಿಸಿದರೂ ಸ್ವರ್ಣದಡದಿಂದ ಹೆಚ್ಚು ದೂರ ಹೋಗದಾದೆವು. ಹವೆಯು ತುಸು ಅನುಕೂಲವಾದೊಡನೆಯೇ ಲಗುಬಗೆಯಿಂದ ಹೊರಡುವಂತೆ ಹಡಗಿನ ಕಪ್ತಾನನಿಗೆ ನಾನು ಆಜ್ಞೆಯಿತ್ತೆ. ಲಂಗರು ತೆಗೆದು ಐದು ಮಿನಿಟು ಕಳೆಯುವಷ್ಟರಲ್ಲೇ ನ್ಯಾಯಾಧೀಶರು ಅಧಿಕಾರಿಯೊಡನೆ ದೋಣಿಯನ್ನೇರಿ ನಮ್ಮ ಹಡಗಿನ ಕಡೆಗೇ ಬರುತ್ತಿದ್ದುದು ತೋರಿಬಂತು.

ನನ್ನ ಗುಟ್ಟು ಬಯಲಾಯಿತೆಂದು ನನಗೀಗ ದೃಢವಾಯಿತು. ಆಗ ಪ್ರಾಣರಕ್ಷಣೆಯ ಯಾವ ಉಪಾಯವೂ ನನಗೆ ತೋಚುತ್ತಿದ್ದಿಲ್ಲ. ಮೂರು ದೇಹಗಳನ್ನು ಅಡಗಿಸಿಟ್ಟಂತೆಯೇ ನಾನೂ ಶರಾಬಿನ ಪೀಪಾಯಿಯೊಂದರಲ್ಲಿ ಅಡಗಿ ತಪ್ಪಿಸಿಕೊಳ್ಳಬಹುದೆಂದು ಆಗ ಅಕಸ್ಮಾತ್ ನನಗೆ ಹೊಳೆಯಿತು.

ನಾನು ಹಡಗದ ಕಪ್ತಾನನನ್ನು ಕೋಣೆಗೆ ಕರೆದು....'ಗೆಳೆಯ, ನ್ಯಾಯಾಧೀಶರು ನನ್ನನ್ನು ಹಿಡಿಯುವುದಕ್ಕಾಗಿಯೇ ಬರುತ್ತಿರುವಂತೆ ಕಾಣು ತಿದೆ. ನೀನು ನನ್ನ ಪ್ರಾಣವುಳಿಸಿದರೆ ಹಡಗಿನ ಸಂಪತ್ತಿನಲ್ಲಿ ನಿನಗೂ ಸಾಕಷ್ಟು ಪಾಲು ಕೊಡುವೆ' ಎಂದೆ. ಹಡಗಿನ ಕಪ್ತಾನನೂ ಗ್ರೀಕನಾಗಿದ್ದ. ಅವನು ನನ್ನ ಮಾತನ್ನೊಪ್ಪಿಕೊಂಡ. ನಾವು ಹಡಗಿನ ಕೆಳಭಾಗಕ್ಕೆ ಹೋದೆವು. ಒಂದು ಪೀಪಾಯಿಯ ಶರಾಬು ತೆಗೆದು, ಅದರ ಮುಚ್ಚಳ ವನ್ನು ಸರಿಸಿ, ನಾನು ಒಳನುಗ್ಗಿದೆ. ಮುಚ್ಚಳವನ್ನು ಮೊದಲಿದ್ದಂತೆ ಯೇ ಹಾಕಿಡಲಾಯಿತು.

ತುಸು ಹೊತ್ತಿನಲ್ಲೇ ನ್ಯಾಯಾಧೀಶರು ನಮ್ಮ ಹಡಗಿಗೆ ಬಂದರು. ಅವರು ನನ್ನ ವಿಚಾರವಾಗಿ ಕೇಳಿದರು. ಬಿರುಗಾಳಿಯಲ್ಲಿ ಸಮುದ್ರಕ್ಕೆ ಬಿದ್ದು ಸತ್ತಿರಬೇಕೆಂದು ಕಪ್ತಾನನು ತಿಳಿಸಿದ.

"ಹಾಗಿದ್ದರೆ ಆ ನೀಚನು ನನ್ನ ಸೇಡಿನಿಂದ ತಪ್ಪಿಸಿಕೊಂಡ! ಅವನು ಶರಾಬನ್ನು ಸ್ವಾದಿಷ್ಟಗೊಳಿಸಲು, ತನ್ನ ಸಂಗಾತಿಗಳನ್ನು ಕೊಂದು ಅದಕ್ಕೆ ಹಾಕುತ್ತಿದ್ದ. ಆದರೆ ಕಪ್ತಾನ್, ನೀನೂ ಗ್ರೀಕನೇ ನೀನು ನಮ್ಮನ್ನು ಮೋಸಗೊಳಿಸಬಹುದು. ನಾವು ನಿನ್ನ ಹಡಗನ್ನೊಮ್ಮೆ ಹುಡುಕಿಯೇ ನೋಡುವೆವು!"—ನ್ಯಾಯಾಧೀಶರೆಂದರು.

ನ್ಯಾಯಾಧೀಶರು ಇತರ ಅಧಿಕಾರಿಗಳೊಡನೆ ಹಡಗವನ್ನೆಲ್ಲ ಹುಡುಕಾಡಿ ದರು. ನಾನು ಸಿಗದೆ ಹೋದುದರಿಂದ ಅವರು ಕಪ್ತಾನನ ಮಾತನ್ನು ನಂಬಲೇ ಬೇಕಾಯಿತು. ನನ್ನನ್ನು ಮನಸ್ಸಿನಲ್ಲೇ ಬಯ್ಯುತ್ತ ನ್ಯಾಯಾಧೀಶರು ಅಧಿಕಾರಿಗಳೊಡನೆ ಹಿಂದಿರುಗಿದರು.

ಈಗ ನಾನು ಬಿಡುಗಡೆಯ ನಿಟ್ಟುಸಿರಿಟ್ಟೆ. ಪೀಪಾಯಿಯೊಳಗೆ ಶರಾ ಬಿನ ವಾಸನೆಯಿಂದ ನನ್ನ ತಲೆತಿರುಗಿದಂತಾಗುತಿತ್ತು. ಈಗ ನಾನು ಅದನ್ನು ಬೇಗನೆ ಸ್ವತಂತ್ರನಾಗಬಯಸುತ್ತಿದ್ದೆ. ಆದರೆ ಕಪಟಿಯಾದ ಕಪ್ತಾನನು ನನ್ನನ್ನು ಪೀಪಾಯಿಯಿಂದ ಹೊರತೆಗೆಯಲಿಲ್ಲ. ಅವನೀಗ ಪೀಪಾಯಿಯ ಸಮೀಪಕ್ಕೂ ಸುಳಿಯುತ್ತಿರಲಿಲ್ಲ.ರಾತ್ರಿಯ ವೇಳೆ ಅವನು ಲಂಗರ್ ತೆಗೆದು ಹೊರಟುಬಿಟ್ಟ. ಹಡಗಿನ ಇಬ್ಬರ ಮಾತುಕತೆಯಿಂದ ಅವನ ಅಭಿಪ್ರಾ ಯವೂ ನನಗೆ ತಿಳಿಯಿತು. ಅವರು ದಾರಿಯಲ್ಲೇ ನನ್ನನ್ನು ಸಮುದ್ರ ಕ್ಕೊಗೆದು ಎಲ್ಲಾ ಸಂಪತ್ತನ್ನೂ ಸ್ವಾಧೀನಪಡಿಸಿಕೊಳ್ಳುವ ಯೋಜನೆಹೂಡಿ

ದ್ದರು. ನಾನು ಬಿಡುಗಡೆಗಾಗಿ ತುಂಬಾ ಕೂಗಾಡಿದೆ. ಆದರೇನೂ ಲಾಭ ವಾಗಲಿಲ್ಲ. 'ಇತರರನ್ನು ಪೀಪಾಯಿಯಲ್ಲಿ ತುರುಕಿಸಿ ಕೊಲೆಗೈದಂತೆಯೇ ನಿನ್ನ ಪ್ರಾಣವೂ ಹೋಗುವುದು' ಎಂದು ಅವರಲ್ಲೊಬ್ಬನೆಂದ.

ಭಾಗ್ಯದ ಈ ನಿರ್ಣಯವು ಸರಿಯಾದುದೆಂದು ನಾನು ಮನದಲ್ಲೇ ಒಪ್ಪಿಕೊಂಡೆ. ಈಗ ಆದಷ್ಟು ಬೇಗನೆ ಸಾವು ಬರಲೆಂದೇ ನನ್ನ ಹಾರ್ದಿಕ ಇಚ್ಛೆಯಾಯಿತು. ಪ್ರತಿಕ್ಷಣವೂ ಮೃತ್ಯುವನ್ನು ನಿರೀಕ್ಷಿಸುತ್ತಿರುವುದು ಮೃತ್ಯುವಿನ ವಾಸ್ತವಿಕತೆಗಿಂತಲೂ ಭಯಂಕರವಾದುದು. ಆದರೆ ನನ್ನ ಭಾಗ್ಯದ ವಿಧಾನವೇ ಬೇರೆ ತೆರನಾಗಿತ್ತು. ಆಗಲೇ ಭಯಂಕರ ಬಿರುಗಾಳಿ ಯೆದ್ದುದರಿಂದ ಕಪ್ತಾನನಿಗೆ ನನ್ನ ಕಡೆಗೆ ಲಕ್ಷ್ಯಕೊಡುವಷ್ಟು ಬಿಡುವು ಸಿಗ ಲಿಲ್ಲ. ಅವರು ಒಂದೋ ನನ್ನನ್ನು ಮರೆತುಬಿಟ್ಟರು; ಅಥವಾ ಹವೆಯು ಸರಿಯಾದ ಮೇಲೆಯೇ ನನ್ನನ್ನು ಕೊಲೆಗೈಯಬೇಕೆಂದು ನಿರ್ಣಯಿಸಿರ ಬಹುದು.

ಮೂರನೇ ದಿನ ಕೆಲವು ನಾವಿಕರು ನನ್ನ ಕುರಿತೇ ಮಾತಾಡುತ್ತಿದ್ದರು. ಹಡಗಿನಲ್ಲಿ ನನ್ನಂತಹ ಪಾಪಿಯಿರುವಾಗ ಅದು ಗಂಡಾಂತರಕ್ಕೆ ಗುರಿಯಾ ಗುವುದರಲ್ಲೇನೂ ಆಶ್ಚರ್ಯವಿಲ್ಲವೆಂದು ಅವರ ಮಾತಿನ ತಾತ್ಪರ್ಯ. ಆ ಬಳಿಕ ನಾನಿರುವ ಪೀಪಾಯಿಯನ್ನು ಅವರು ಸಮುದ್ರಕ್ಕೆಸೆದು ಬಿಟ್ಟರು. ಪೀಪಾಯಿಯ ತೂತಿನೊಳಗೆ ಕರವಸ್ತ್ರವನ್ನು ತುರುಕಿಸಿ ನೀರು ಒಳಸೇರದಂತೆ ನಾನು ಜಾಗ್ರತೆವಹಿಸುತ್ತಿದ್ದೆ. ಪೀಪಾಯಿಯ ತೂತು ನೀರಿನ ಮೇಲ್ಮಟ್ಟಕ್ಕೆ ಬಂದಾಗ ಕರವಸ್ತ್ರವನ್ನು ತೆಗೆದು ಸ್ವಚ್ಛಗಾಳಿಯನ್ನು ಸೇವಿಸುತ್ತಿದ್ದೆ. ಸಮು ದ್ರದಲ್ಲಿ ಪೀಪಾಯಿಯು ಉರುಳುತ್ತಿದ್ದುದರಿಂದ ನನ್ನ ದೇಹವೆಲ್ಲ ಜರ್ಜರಿತ ವಾಯಿತು. ನೋವು, ದಣಿವುಗಳಿಂದ ನಾನು ಮೃತಪ್ರಾಯನಾದೆ. ಕಟ್ಟ ಕಡೆಗೆ ಪೀಪಾಯಿಯೊಳಗೆ ನೀರು ತುಂಬುವಂತೆ ಮಾಡಿ ಈ ದುಃಖದ ಜೀವ ನದಿಂದ ಬಿಡುಗಡೆಹೊಂದಬೇಕೆಂದು ನಾನು ನಿರ್ಧರಿಸಿದೆ. ಆಗಲೇ ನನಗೆ ಮನುಷ್ಯರ ಧ್ವನಿ ಕೇಳಿಸಿತು. ನನ್ನ ಧ್ವನಿಯನ್ನು ಕೇಳಿ ಭಯದಿಂದ ಓಡಿ ಹೋದಾರೆಂದು ಬಗೆದು ನಾನು ಕೂಗಲಿಲ್ಲ. ಆದರೆ ಜನರು ಹತ್ತಿರ ಬಂದಾಗ ಕಿರುದನಿಯಿಂದ 'ನನ್ನನ್ನು ಹೊರತೆಗೆಯಿರಿ' ಎಂದು ಹೇಳಿದೆ.

ಮೊತ್ತಮೊದಲು ಅವರು ಹೆದರಿ ಸುಮ್ಮನೆ ನಿಂತರು. ನಾನು ಹಡ ಗೊಂದರ ಒಡೆಯನೆಂದೂ ಹಡಗಿನ ಕಪ್ತಾನನೂ ಉಳಿದ ನಾವಿಕರೂ ದಂಗೆ

ಯೆದ್ದು ನನ್ನನ್ನೀ ದುಃಸ್ಥಿತಿಗೆ ಗುರಿಪಡಿಸಿದರೆಂದೂ ತಿಳಿಸಿದ ಮೇಲೆ ಅವರು ನನ್ನನ್ನು ಬಂಧವುುಕ್ತಗೊಳಿಸಿದರು.

ಪೀಪಾಯಿಯಿಂದ ಹೊರಬಂದು ನಾನು ಸಮುದ್ರದತ್ತ ದೃಷ್ಟಿಹರಿಸಿದೆ. ನನ್ನ ಹಡಗಿನ ಭಗ್ನಾವಶೇಷಗಳೇ ಮೊತ್ತಮೊದಲು ಕಣ್ಣಿಗೆ ಬಿದ್ದವು. ಹಡಗು ಅಲೆಗಳ ಆಘಾತಕ್ಕೆ ಸಿಕ್ಕಿ ನುಚ್ಚುನೂರಾಗಿ ದಡದತ್ತ ಬರುತ್ತಿತ್ತು. ಹಡಗು ಚೂರಾಗಿದ್ದರೂ ಅದರೊಳಗಿದ್ದ ಶರಾಬಿನ ಪೀಪಾಯಿಗಳು ಸ್ಪಷ್ಟವಾಗಿ ತೋರಿಬರುತ್ತಿದ್ದವು. ಹಡಗು ದಡಕ್ಕೆ ಬರುತ್ತಲೇ ನನ್ನನ್ನು ಬದುಕಿಸಿದ ಆ ಜನರು ಪೀಪಾಯಿಗಳನ್ನು ಸಂಗ್ರಹಿಸತೊಡಗಿದರು. ನಾನು ತುಂಬ ದಣಿದಿದ್ದುದರಿಂದ ದಡದ ಮೇಲೊರಗುತ್ತಲೇ ಮೂರ್ಛಿತನಾದೆ.

ತಿಳಿವು ಬಂದಾಗ ನಾನೊಂದು ಗುಹೆಯಲ್ಲಿದ್ದೆ. ನನ್ನ ಅಕ್ಕ ಪಕ್ಕದಲ್ಲಿ ಸುಮಾರು ೪೦-೫೦ ಜನರು ಕುಳಿತು ಶರಾಬಿನ ಪೀಪಾಯಿಯೊಂದನ್ನು ಬರಿದುಮಾಡುವುದರಲ್ಲಿ ಮಗ್ನರಾಗಿದ್ದರು.

ನಾನು ಎಚ್ಚೆತ್ತಿರುವೆನೆಂದು ತಿಳಿದಾಗ ಅವರು ನನಗೂ ತುಸು ಶರಾಬು ಕುಡಿಸಿದರು. ನಾನು ಸಂಪೂರ್ಣ ಸ್ವಸ್ಥನಾದೆ. ಆಗ ಅವರ ಸರದಾರನು ನನ್ನ ಬಳಿಗೆ ಬಂದ.

ಅವನೆಂದ—'ಹಡಗಿನಲ್ಲಿದ್ದ ಜನರು ನಿನ್ನ ಭಯಂಕರ ಅಪರಾಧದ ಕುರಿತು ತರತರದ ವಿಚಿತ್ರಕತೆಗಳನ್ನು ತಿಳಿಸಿದ್ದಾರೆ. ಈಗ ನೀನು ನಿನ್ನ ವಿಚಾರವನ್ನೆಲ್ಲ ಸ್ಪಷ್ಟವಾಗಿ ತಿಳಿಸು. ನಾನು ಇಲ್ಲಿನ ನ್ಯಾಯಾಧೀಶ. ನಿನ್ನ ಮಾತುಗಳ ಮೇಲೆ ನನಗೆ ಭರವಸೆಯುುಂಟಾದಲ್ಲಿ ನಿನ್ನೊಡನೆ ನ್ಯಾಯದಿಂದ ವರ್ತಿಸಲಾಗುವುದು. ನೀನೆಲ್ಲಿರುವೆಯೆಂಬುದನ್ನು ತಿಳಿಯಬೇಕಿದ್ದರೆ ಕೇಳು. ನೀನೀಗ ಇಶ್ಚಿಯಾ ದ್ವೀಪದಲ್ಲಿರುವಿ. ಇಲ್ಲಿ ವಾಸಿಸುವ ಜನರನ್ನು ಪ್ರಪಂಚದ ಔದಾರ್ಯಹೀನ ಜನರು 'ಹಡಗುಗಳ್ಳ'ರೆಂದು ಕರೆಯುತ್ತಾರೆ.

ದರೋಡೆಗಾರರಿಗೆ ನನ್ನ ಕತೆ ಅಷ್ಟೇನೂ ಭೀಕರವೆನಿಸದೆಂದು ಬಗೆದು ನಾನು ಎಲ್ಲಾ ಘಟನೆಗಳನ್ನೂ ಇದ್ದಕ್ಕಿದಂತೆ ವರ್ಣಿಸಿದೆ. ನಿಮಗೀಗ ತಿಳಿಸಿದಂತೆಯೇ ಅಲ್ಲಿಯೂ ತಿಳಿಸಿದ್ದೆ. ನನ್ನ ಕತೆ ಕೇಳಿ ದರೋಡೆಗಾರರ ಸರದಾರನೆಂದ—'ಹಾಗಿದ್ದರೆ ನೀನು ನೀಗ್ರೋವಿನ ಕೊಲೆ, ಯಹೂದೀ ಮಾಲಿ

ಕನ ಕೊಲೆಯಲ್ಲಿ ಸಹಾಯ ಹಾಗೂ ಶರಾಬಿನಲ್ಲಿ ಮುಳುಗಿಸಿ ಆಗಾಖಾನರ ಕೊಲೆ—ಈ ಮೂರೂ ಅಪರಾಧಗಳನ್ನು ಒಪ್ಪುತ್ತಿಯಲ್ಲವೆ? ನಿನಗೆ ಮರಣ ದಂಡನೆ ವಿಧಿಸಬೇಕಿತ್ತು. ಆದರೆ ನೀನು ನಮಗೆ ಬಹು ಉತ್ತಮವಾದ ಶರಾಬು ಕೊಟ್ಟಿರುವಿ, ಮತ್ತು ಇದರ ಗುಟ್ಟನ್ನು ನಮಗೆ ತಿಳಿಸಿರುವಿ. ಆದ್ದರಿಂದ ನಾನು ನಿನ್ನ ಶಿಕ್ಷೆಯನ್ನು ಕಡಿಮೆಮಾಡುತ್ತೇನೆ. ಹಡಗಿನ ಕಪ್ತಾನನೂ ನಾವಿಕರೂ ನಿನ್ನೊಡನೆ ವಿಶ್ವಾಸಘಾತವೆಸಗಿದ್ದಾರೆ. ಅದಕ್ಕೆ ನಮ್ಮ ನ್ಯಾಯದ ಮೇರೆಗೆ ಮರಣವೇ ಶಿಕ್ಷೆ. ಆದರೆ ಈ ಉತ್ಕೃಷ್ಟ ಶರಾಬು ಅವರ ದಯೆಯಿಂದಲೇ ನಮಗೆ ದೊರೆತಿದೆ. ಆದ್ದರಿಂದ ನಾನು ನಿಮಗೆಲ್ಲರಿಗೂ ಜೀವನವಿಡೀ ಕಠಿಣ ಪರಿಶ್ರಮಪಡುವಂತಹ ಶಿಕ್ಷೆವಿಧಿಸುತ್ತೇನೆ ನಿಮ್ಮನ್ನು ಕೈರೋದಲ್ಲಿ ಗುಲಾಮರನ್ನಾಗಿ ಮಾರಲಾಗುವುದು, ಮತ್ತು ನಾವು ಈ ಶರಾಬಿನ ಹಣದಿಂದಲೂ ನಿಮ್ಮೆಲ್ಲರನ್ನು ಮಾರಿಬಂದ ಸಂಪತ್ತಿನಿಂದಲೂ ಸುಖವಾಗಿ ಜೀವನಸಾಗಿಸುವೆವು.'

ದರೋಡೆಗಾರರೆಲ್ಲ ಈ ತೀರ್ಮಾನವನ್ನು ಮುಕ್ತಕಂಠದಿಂದ ಕೊಂಡಾಡಿದರು. ಏಕೆಂದರೆ ಅವರಿಗಿದರಿಂದ ಬಹಳ ಲಾಭವಾಗುವುದಿತ್ತು. ನಮ್ಮ ವಿನಂತಿಗಳೆಲ್ಲವೂ ವ್ಯರ್ಥವಾದುವು. ಹವೆ ಅನುಕೂಲವಾದೊಡನೆಯೇ ನಮ್ಮನ್ನು ಹಡಗಿನಲ್ಲಿ ಇಲ್ಲಿ ತಂದು ಮಾರಲಾಯಿತು.

ಪಾಶಾ ಸಾಹೇಬರೆ! ಇದೇ ನನ್ನ ಇತಿಹಾಸ. ಅಪರಾಧಿಯೆಂಬುದಕ್ಕಿಂತ ಹೆಚ್ಚಾಗಿ ನಾನು ದುರ್ದೈವಿಯೆಂಬುದನ್ನು ನೀವೂ ಒಪ್ಪುವಿರೆಂದು ನನ್ನ ನಂಬುಗೆ. ಏಕೆಂದರೆ ನಾನು ಕೊಲೆಗೈಯಬೇಕಾದ ಸಂದರ್ಭಬಂದಾಗಲೆಲ್ಲ 'ಒಂದೋ ನಾನು ಸಾಯಬೇಕು, ಇಲ್ಲವೇ ಕೊಲ್ಲಬೇಕು' ಎಂದಿಷ್ಟೇ ಯೋಚಿಸುವ ದುರ್ಧರ ಪ್ರಸಂಗವೊದಗಿತ್ತಲ್ಲದೆ ಮತ್ತಾವ ಉಪಾಯಕ್ಕೂ ಆಗ ಅವಕಾಶವೇ ಇರುತ್ತಿದ್ದಿಲ್ಲ."

(ಸಂಪೂರ್ಣ.)

To make a long Story

SHORT

ಸುದೀರ್ಘ ಗೋಷ್ಟಿಯನ್ನು ಸಂಕ್ಷಿಪ್ತಗೊಳಿಸುವುದಾದರೆ ....

—ಅಹುದು. ನಿಮ್ಮ ಮಗುವು ಹಣವುಳಿಸುವಂತೆ, ಉಳಿಸಿದಷ್ಟನ್ನು ಸೇವಿಂಗ್ಸ್ ಬೇಂಕ್ ಖಾತೆಯಲ್ಲಿ ಠೇವಣೆಯಿರಿಸುವಂತೆ, ಆ ಮಗುವಿಗೆ ಕಲಿಸಬಲ್ಲಿರಾದರೆ, ನಿಮ್ಮ ಮಗುವನ್ನು ನೀವು ಊಹಿಸಿದ್ದಕ್ಕಿಂತಲೂ ಅಲ್ಪಾವಧಿಯಲ್ಲಿ ಸಾರ್ಥಕ್ಯಕ್ಕೂ ಸೌಭಾಗ್ಯ ಸಂತೋಷಗಳಿಗೂ ಕರೆದೊಯ್ಯಬಲ್ಲಿರಿ.

ಚಲಾವಣೆ ಬಂಡವಾಲ ರೂ. 6,50,00,000.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.

THE CANARA INDUSTRIAL & BANKING SYNDICATE Ltd

ESTD. 1925

H.O. UDIPI (S.I) HOMJI St. BOMBAY

Edited, Printed and Published by K. V. Shenoy
at The Prabhat Printers, Ltd., Mangalore-1.